
ಕೊರವಂಜಿ



ಮೇ ೧೯೪೩

ಮಾಸ ಪತ್ರಿಕೆ

ಸಂಪಾದಕರು :
ಶ್ರೀ॥ ರಾ. ಶಿ.

ಚಿತ್ರಕಾರರು :
ಶ್ರೀ॥ ಆರ್. ಕೆ. ಲಕ್ಷ್ಮಣ್

ಬರಹಗಾರರು :

ಶ್ರೀ॥ ನಾ. ಕ.
ಶ್ರೀ॥ ಬಿ. ವಿ. ಸು.
ಶ್ರೀ॥ ಮೋಹನರಾಂ
ಶ್ರೀಮತಿ ಟಿ. ಎಂ.
ಶ್ರೀ॥ ಎ. ಎಸ್. ಆರ್.
ಶ್ರೀ॥ ಪು. ಪುರಂಧರ
ಶ್ರೀ॥ ಎಸ್. ವೀ. ವೀ. ಕೃತಂ
ಶ್ರೀ॥ ಎಂ. ವಿ. ನಾ.
ಶ್ರೀ॥ ಶರತ್
ಶ್ರೀಮತಿ ಕೆ. ವಿ. ರ.

ಬಿಡಿ ಪತ್ರಿಕೆ
ಕೇವಲ ಎರಡಾಣೆ

ನಗೆಯ ಮಾಸ ಪತ್ರಿಕೆ

ಕೊರವಂಜಿ

ಕೊರವಂಜಿಯು ತಿಳಿನಗೆಯ ಸಚಿತ್ರ ಮಾಸಪತ್ರಿಕೆ. ತಿಳಿಹಾಸ್ಯದ ಲೇಖನಗಳು, ಹರಟೆಗಳು, ಅಣಕವಾಡುಗಳು, ನಗೆ ಹಾಡುಗಳು ಇವುಗಳಿಗೆ ಸರ್ವದಾ ಸುಸ್ವಾಗತವುಂಟು. ಆದರೆ ವ್ಯಕ್ತಿಯನ್ನುದ್ದೇಶಿಸಿ ಬರೆದ ಲೇಖನಗಳಿಗೆ ಎಡೆಯಿಲ್ಲ.

ಲೇಖನಗಳನ್ನು ಕಳುಹಿಸುವವರು ತಮ್ಮಲ್ಲಿ ಒಂದು ಪ್ರತಿಯನ್ನಿಟ್ಟುಕೊಂಡರೆ ಬಹಳ ಒಳಿತು. ಸುಲಭವಾಗಿ ಓದುವಂತೆ ತಿಳಿಬರಹದಲ್ಲಿ ಬರೆದರೆ, ಅಚ್ಚಾದಾಗ ತಪ್ಪುನೆಪ್ಪುಗಳು ಕಡಿಮೆಯಾಗುವುವು.

ಸಂಪಾದಕೀಯ ಪತ್ರವ್ಯವಹಾರಗಳನ್ನು ಸಂಪಾದಕರಲ್ಲೂ ವ್ಯವಸ್ಥಾಪಕರಲ್ಲಿ ನಿಕ್ಕ ವಿಚಾರಗಳನ್ನೂ ಪ್ರಸ್ತಾಪಿಸಬೇಕು.

ಬಳೇಪೇಟೆ, ಬೆಂಗಳೂರು ಸಿಟಿ.

ವಾರ್ಷಿಕ ಚಂದಾ ಅಂಚೆ ಮೂಲಕ ರೂ. ೨—೦—೦

ಬಿಡಿ ಪ್ರತಿ ಕೇವಲ ಆಣೆ ೦—೨—೦

ವಿಷಯಾನುಕ್ರಮಣಿಕೆ

ಭಾರತೀಯ ಕಾರ್ಮಿಕರಿಂದ

ಭಾರತೀಯ ಬಂಡವಾಳಗಾರರಿಂದ

ಭಾರತೀಯ ಕಲಾಕೌಶಲ್ಯದಿಂದ

ಕೂಡಿರುವುದೇ

•


ಬೆಂಗಾಲ್ ಲ್ಯಾಂಪ್ಸ್


ತಯಾರಿಕೆಯ ವೈಶಿಷ್ಟ್ಯ

—

ಭಾರತದಲ್ಲೆಲ್ಲಾ ಉತ್ತಮವಾದುದೆಂದು

ಖ್ಯಾತಿಪಡೆದಿವೆ


WORRY
LIFE INSURANCE
WORRY



ಸಂಪುಟ ೨] ಕೊರವಂಜಿ—ಮೇ ೧೯೪೩ [ಸಂಚಿಕೆ ೨

ಕುಹಕಿಡಿಗಳು

ವಸಂತ ಋತು ಶುರುವಾಯಿತು, ಎಂಬ ಶಿರೋನಾಮೆ.

—ಅಲ್ಲವೇ, ಎಲ್ಲೆಲ್ಲೂ ಓಕುಳಿ ಚೆಲ್ಲುತ್ತಿಲ್ಲವೇ?

* *

ವಿಮಾನ ಕಾರ್ಖಾನೆಯಲ್ಲಿನ ಕೆಲಸಗಾರರ ವಜ ಮಾಡಿದುದು ಯುದ್ಧ ಇಷ್ಟರಲ್ಲೇ ಮುಗಿಯುವುದರ ಸೂಚನೆ ಎಂದು ಭಾವಿಸುವುದು ನಿರಾಧಾರವಾದುದೆಂದು ನಮಗೆ ಅಧಿಕಾರಯುತವಾಗಿ ತಿಳಿಯ ಬಂದಿದೆ.

* *

ಹಳ್ಳಿಗಳಲ್ಲಿ ಕೂಡ ಹಾಲು ಸಿಕ್ಕುವುದಿಲ್ಲವಂತೆ.

—ಅದು ಹಾಗಿರಲಿ ಬೆಂಗಳೂರಿನಲ್ಲಿ ನೀರು ಕೂಡ ಸಿಗುವುದಿಲ್ಲವಲ್ಲ!

* *

ಪತ್ರಿಕೆಗಳ ಗೋಳು ಅಷ್ಟಿಷ್ಟಲ್ಲವಂತೆ.

—ಹಾಳೆ ತುಂಬಾ ಹೊಡಕೊಳ್ಳೋಣ ಅಂದರೆ ಹಾಳೇನೆ ಸಿಗುಲ್ಲವಂತೆ.

* *

ಬಾಯಿ ಬೀಗ ಹಾಕಿಕೊಂಡು ತಿರುಪತಿ ಯಾತ್ರೆ ಮಾಡಬೇಕಂತೆ.

—ಹೌದು, ಪತ್ರಿಕೋದ್ಯಮಕ್ಕೆ ಸೇರುವವರೂ ಹಾಗೆಯೇ ಮಾಡಬೇಕಂತೆ.

* *

ಬಟ್ಟೆ ಬೆಲೆ ಬಹಳ ಏರಿದೆಯಂತೆ.

—ನಮಗೇನೂ ದುಃಖವಿಲ್ಲ. ಹೊಟ್ಟೆ ಒಳಗೆ ತುಂಬೋದೇ ಕಷ್ಟವಾದಾಗ ಹೊಟ್ಟೆ ಹೊರಗೆ ಬಟ್ಟೆ ಇದ್ದರೇನು ಬಿಟ್ಟರೇನು?

* *

ನಮ್ಮೂರಿಗೆ ಬಂದ ಇಂದ್ರ ಜಾಲೀಕನೊಬ್ಬನು ಚಾಕು ಕತ್ತಿಗಳನ್ನೇ ನುಂಗಿದನಂತೆ.

—ಪಾಪ ಏನು ಮಾಡುತ್ತಾನೆ! ರೇಷನಿಂಗ್ ಫಲ.

* *

ಪಾಲಿಸ್ಟೈನಲ್ಲಿ ಪಾಕಿಸ್ತಾನ ಚಳುವಳಿಯು ಆರಂಭವಾಗಿದೆಯಂತೆ.

* *

ಭಾರತದಿಂದ ಚೈನಾಕ್ಕೆ ಕ್ವಿನೀನ್ ಟನ್ನುಗಟ್ಟಲೆ ಹೋಯಿತಂತೆ.

—ಮನೇನ ಮಾರಿ, ಪರರಿಗೆ ಉಪಕಾರಿ.

* *

ಭಾರತೀಯ ವಿರೋಧ ಕಾನೂನು ಆಫ್ರಿಕಾದಲ್ಲಿ ಮಂಜೂರಾಯಿತಂತೆ.

—ಅಂದ ಮೇಲೆ ಶತ್ರುಗಳು ದಿಟವಾಗಿಯೂ ಸೋತಿರಲೇಬೇಕಲ್ಲವೇ?

* *

ಹಣಕ್ಕೂ ಹೆಣಕ್ಕೂ ಬಹಳ ಹತ್ತಿರ ಸಂಬಂಧವಂತೆ. ಹಣಕ್ಕಾಗಿ ಹೆಣವಾಗುವುದೂ, ಹೆಣವೂ ಹಣಕ್ಕಾಗಿ ಬಾಯಿಬಿಡುವುದೂ ಸಾಮಾನ್ಯವಂತೆ.

—ಹೌದು, ಅದಕ್ಕೇ ಯುದ್ಧಕಾಲದಲ್ಲಿ ಎರಡೂ ಹೇರಳವಾಗಿ ದೊರೆಯುವುದು.

* *

ಈ ಸಾರಿ ಕಾಮನ ಹಬ್ಬದಲ್ಲಿ ಹೊಸ ಸಾಮೂಹಿಕ ಹಾಡನ್ನು ಹಾಡಿದರಂತೆ.

—ಕಾಮಣ್ಣ ಕಟ್ಟಿಗೆ ಭೀಮಣ್ಣ ಬೆರಣಿ
ಸೀಮೆಯೆಣ್ಣೆ ಸೀಮೆಗೆ ಹೋಯ್ತು
ಭೂಮಿ ಕಾಣಿ ಸಾಲಕ್ಹೋಯ್ತು
ಬೋಲ—ಬೋಲ—ಬೋಲ—ಬೋಲ.

——o——



“ಅವರು ಈವಾಗ ಅಕ್ಕಿ ರೇಷಸಂಗ್ ಆಫೀಸಿನಲ್ಲಿದ್ದಾರೆ”........ಗೊತ್ತಾಯಿತೆ !

ಹುರಿಗಾಳು

ಅಲ್ರಿ! ಇದಿಷ್ಟು ಔಷಧೀನ ಸೇವಿಸಿ ಬಿಟ್ಟರೆ, ಆಮಶಂಕೆ ಸಂಪೂರ್ಣ ವಾಸಿ ಯಾಗುತ್ತದೇನು?

ಓಹೋ! ವಾಸಿ ಆಗಿಲ್ಲ ಅಂತ ಹೇಳಿ ಕೊಂಡು ಮತ್ತಷ್ಟು ಔಷಧಿಕೊಡಿ ಅಂತ ಇದುವರೆಗೂ ಒಬ್ಬರೂ ನಮ್ಮ ಅಂಗಡಿ ಕಡೆ ಬಂದೇ ಇಲ್ಲ.... ನೋಡಿಕೊಳ್ಳಿ.

*   *

ಏನಯ್ಯಾ! ಇಂತಹ ಇಡ್ಲಿ ತಂದಿಟ್ಟಿ ದೀಯಲ್ಲ ನನ್ನ ಮುಂದೆ! ನಾಯಿ ತಿನ್ನದ ಪದಾರ್ಥ—ಅಂತ ರೇಗಿದರು ತಿಮ್ಮೇ ಗೌಡರು!

ಆಗ ಹೋಟಲ್ ಮಣಿ,—ತಾಳಿ, ಸಾಹುಕಾರರೇ! ನಾಯಿ ತಿನ್ನುವ ಯಾವು ದಾದರೂ ಪದಾರ್ಥವಿದೆಯೇ ನೋಡು ತ್ತೇನೆ,—ಅಂದ.

*   *

ಮ್ಯಾನೇಜರೇ! ನನ್ನ ಹೆಸರಿಗೆ ನಿಮ್ಮ ಪೇಪರು ದಿನವೂ ಮೂರು ಪ್ರತಿ ಕಳು ಹಿಸಿ. ಅಂತ ಅವರು ಅಂದಾಗ,

ಮ್ಯಾನೇಜರು,—ಅದೇಕೆ ಸ್ವಾಮಿ! ತಮ್ಮ ಮನೆಯಲ್ಲಿ ಅಷ್ಟೊಂದು ಜನ ಇದಾರೆಯೇ? ಅಂದರಂತೆ.

ಅದಕ್ಕವರು,—ಇಲ್ಲ, ನಮ್ಮ ಪಕ್ಕದ ಮನೆಯವರಿಬ್ಬರೂ ನಮ್ಮ ಮನೆಗೇ ತಿರುಪೆಗೆ ಬರುತ್ತಾರೆ,—ಅಂದರಂತೆ.

*   *

ಆ ಹೋಟಲಿಂದ ಕದ್ದ ಬೋಂಡ ಗಳನ್ನು ನೀನು ಏನು ಮಾಡಿದೆ?— ಅಂತ ಮ್ಯಾಜಿಸ್ಟ್ರೇಟರು ಕೇಳಿದರು.

ತಿಂದು ಹಾಕಿಬಿಟ್ಟೆ, ಅಂತ ಉತ್ತರ ಕೊಟ್ಟ ಕೈದಿ, ಅಳು ಮೋರೆಯಿಂದ.

ಸರಿ! ಹಾಗಾದರೆ! ನಿನಗೆ ತಕ್ಕಷ್ಟು ಶಿಕ್ಷೆಯಾಗಿದೆ.... ಹೋಗು! ನಿನಗೆ ಖುಲಾಸೆ ಆಗಿದೆ,—ಅಂದರು ಮ್ಯಾಜಿಸ್ಟ್ರೇಟರು.

*   *

ಅಯ್ಯೋ! ಏಳಿ, ಅಂದರೆ! ಪಕ್ಕದ ರೂಮಿನಲ್ಲಿ ಏನೋ ಸದ್ದಾಗುತ್ತಿದೆ... ಏಳಿ, ಅಂದ್ರೆ..... ಕಳ್ಳನೋ ಏನೋ! ಹುಂ.... ಏಳಿ....

ತಡಿಯೇ ಏನು ಅವಸರ! ಬೆಳಗ್ಗೆ ಎದ್ದು ಟ್ರಂಕು ತೆಗೆದು ನೋಡೋಣ, ಒಡವೆ ಗಿಡವೆ ಬೆಳ್ಳಿ ಪಾತ್ರೆ ಎಲ್ಲಾನೂ ಇದೆಯೇ ಅಂತ.... ಆಗ ಗೊತ್ತಾಗುತ್ತೆ ಕಳ್ಳನೋ ಏನೋ ಅಂತ..... ಸುಮ್ಮನೆ ನಿದ್ದೆಮಾಡು.... ಕೂಗಾಡಬೇಡ.

*   *

ಯಾಕೆ? ಜಾನಕಮ್ಮನವರೇ! ಗಂಟಲು ಹೀಗೆ ಕೆಟ್ಟುಹೋಗಿದೆಯಲ್ಲಾ!

ಅಯ್ಯೋ! ನಾನು ಯಾವುದೋ ತರ ಹದ್ದು ಸೀರೆ ತನ್ನಿ ಅಂದ್ರೆ ಅವರು ಇನ್ನೊಂದು ತರಹದ್ದು ತಂದು ಬಿಟ್ಟರು .... ಅಷ್ಟೆ.... ಇನ್ನೇನು ಇಲ್ಲ.

*   *

ನಮ್ಮ ತಾತ ಮುತ್ತಾತಂದಿರು ಮಾಡುತ್ತಿದ್ದ ಕಜ್ಜಾಯ ಲಡ್ಡೂಗೆ ಚಕ್ಕುಲಿ ಮುಂತಾದ ತಿಂಡಿಗಳೇನಾದುವು?....

ಎಲ್ಲವನ್ನೂ ಅವರು ತಿಂದು ಮುಗಿಸಿರಬೇಕು!

*   *

ಟ್ರೆಜರಿ ಬಾಗಿಲಲ್ಲಿ ಕಾದು ನಿಂತಿದ್ದ ಜವಾನನನ್ನು ಗುಮಾಸ್ತ ಗದರಿಸಿ,—ಏನೋ! ಏನು ಬೇಕೋ ನಿನಗೆ?—ಅಂದರು. ಏನಿಲ್ಲ ಸ್ವಾಮಿ! ನಮ್ಮಾಫೀಸಿನಿಂದ ಒಸಿ ಹಣ ಕಟ್ಟೋಣ ಅಂತ ಬಂದೆ....ಈಗ ಹಂಗೇನೆ ಒಂದು ಪಿಂಚಣಿ ಫಾರಮ್ಮೂನೂ ಕೊಟ್ಬಿಡಿ ಸ್ವಾಮಿ.... ಅಂದನಂತೆ.

* *

ಈಗಿನ ಕಾಲದ ಹುಡುಗರು ಮದುವೆ ಅಂದ್ರೆ ಹೆದರಿ ಸಾಯುತ್ತವೆ!....ಮದುವೆ ಮಾಡಿಕೊಳ್ಳುವುದಕ್ಕೆ ಮೊದಲು ನನಗೆ ಹೆದರಿಕೇನೇ ಇರಲಿಲ್ಲ,—ಅಂತ ಹಿರಿಯರೊಬ್ಬರು ಹೇಳಿದರು, ಮೊನ್ನೆ ಗಂಡೂರು ಕ್ಲಬ್ಬಿನಲ್ಲಿ.

ಅಪರಾಧಿಯನ್ನು ಬಲ್ಲಿರೇನ್ರಿ?

ಬಲ್ಲೆ, ಸ್ವಾಮಿ.

ಎಷ್ಟು ವರ್ಷದಿಂದ?

ಹದಿನಾರು ವರ್ಷದಿಂದ.

ಸರಿ! ಹಾಗಾದರೆ ಹೇಳಿ, ಅಪರಾಧಿ ಈ ಹಣವನ್ನು ದುರುಪಯೋಗ ಮಾಡಿರುತ್ತಾನೆಯೇ?

ಅಂದ್ರೆ?

ಅಲ್ರಿ! ಈ ಹಣವನ್ನ ಈತ ಬಾಯಿಗೆ ಹಾಕಿಕೊಳ್ಳತಕ್ಕವನೋ ಅಲ್ಲವೋ, ಹೇಳಿ....

ತಾಳಿ, ಸ್ವಾಮಿ!......ಎಷ್ಟು ಹಣ ಅಂತ ಹೇಳಿ! ಕೊಂಚ.

* *



(ಮೀಸೆ ಮನುಷ್ಯ) "....ಮಹಾ....ಅದೇನು ನನಗೆ ಬಾಯಲ್ಲೇ ಇದೆ."

"ನಿಜ! ಆದರೆ ನಾವೇನು ಈಗ ಮೀಸೆ ವಿಚಾರ ಮಾತಾಡುತ್ತಿಲ್ಲವಲ್ಲ....... ಇಲ್ಲಿ ಕೇಳಿ......."

* *

"ಬೇಸರಗಾರ"

ಹೆಬ್ಬಿ, ಗುಬ್ಬಾಲೆ ಅವಳಿ ಜವಳಿ ಹಳ್ಳಿಗಳು. ಹೆಬ್ಬಿ ಅವಳಿಗೆ ಪ್ರಖ್ಯಾತಿ, ಗುಬ್ಬಾಲೆ ಜವಳಿ ಎಂದರೆ ಹೆಸರುವಾಸಿ ಕರ್ನಾಟಕದಲ್ಲೆಲ್ಲಾ. ಹೆಬ್ಬಿ ವಿಷಯಾನೆ ಈಗ ಹೇಳಹೊರಟಿದ್ದೆ. ಗುಬ್ಬಾಲೇದೇ ಬೇರೆ ಕತೆ ಎನ್ನಿ.

ಹೆಬ್ಬಿ, ಮೊದಲೇ ಹೇಳಿದಂತೆ ಅವಳಿಗೆ ಪ್ರಖ್ಯಾತಿ ಅಂದಮೇಲೆ ಅವಳನ್ನು ಮದುವೆಮಾಡಿಕೊಂಡವರೆಲ್ಲರೂ ದಿನದಲ್ಲಿ ಒಂದೆರಡು ಗಂಟೆಯಾದರೂ ಸುಖವಾಗಿ ಕಾಲ ಕಳೆಯೋಣ ಎಂದು, ಅವಳನ್ನೂ ಮನೆಯನ್ನೂ ತಪ್ಪಿಸಿಕೊಂಡು ಪುರ ಭವನಕ್ಕೆ ಹೋಗಿ ಹರಟೆ, ಇಸ್ಪೀಟು ಇತ್ಯಾದಿಗಳಲ್ಲಿ ತಲ್ಲೀನರಾಗುತ್ತಾರೆ. ದಿನ ವೆಲ್ಲಾ ಸಜ ಆದವರಿಗೆ ಈ ಪುರಭವನದ ಕಾಡಹರಟೆಯೇ ರಜ. ಹಾಗಾಗಿ ಜನ ಸಂದಣಿ ಹೆಚ್ಚು.


ಮನುಷ್ಯನು ತನ್ನ ಕಷ್ಟ ಕಂಡವರಲ್ಲಿ ಹೇಳಿಕೊಂಡರೆ ಕಷ್ಟ ಕಡಿಮೆಯಾಗು ತ್ತದಂತೆ. ಸುಖದಲ್ಲಿ ಭಾಗಿಗಳನ್ನು ತೆಗೆದುಕೊಂಡರೆ ಸುಖ ಇಮ್ಮಡಿಯಾಗುತ್ತ ದಂತೆ. ನೀವನ್ನಬಹುದು ನಿನ್ನ ಕಷ್ಟ ಕಡಿಮೆಮಾಡಿಕೊಳ್ಳಲು ನೀನು ಇದನ್ನು ಬರೆದೆಯಾ ಎಂದು ಅಹಂಕಾರದಿಂದಲೇ ನಾನು ಹೇಳಬೇಕು ಇಲ್ಲಪ್ಪಾ ಸುಖ ಇಮ್ಮಡಿಯಾಗಲೀ ಇಬ್ಬರಿಗೂ ಎಂದು ಬರೆಯುತ್ತೇನೆ ಎಂದು. ಆದರೆ ಹಾಗೆ ಹೇಳಲು ಧೈರ್ಯವಿಲ್ಲ—ಅಲ್ಲದೇ ನಾನು ಸತ್ಯಪ್ರೇಮಿ. ಅನೃತವನ್ನೆಂದಿಗೂ ಆಡೆ —ಪ್ರಯೋಜನವಿಲ್ಲದಿದ್ದರೆ.—

ಇದು ಏಕೆ ಹೇಳಿದೆ ಗೊತ್ತೆ. ಹೆಬ್ಬಿಯ ಪುರಭವನದಲ್ಲಿ ಸೇರಿದವರೆಲ್ಲರೂ ತಂತಮ್ಮ ಕಷ್ಟಗಳನ್ನು ಸಿಕ್ಕಿದವರಿಗೆ ಹೇಳಹೊರಡುತ್ತಾರೆ. ನೋಡಿ, ನಮ್ಮನೆ ಎತ್ತು ಇವತ್ತು ಈಯ್ತು ಎನ್ನುವ ಹೊತ್ತಿಗೆ ಕೇಳುತ್ತಿದ್ದವನು ಕೊಟ್ಟಿಗೆಗೆ ಕಟ್ರಿ, ಇದೇನು ಮಹಾ ಎಂದು ಛಂಗು ಹೊಡೆದು ಓಡಿಹೋಗಲೆತ್ನಿಸುತ್ತಾನೆ. ಒಬ್ಬನ ಗೋಳು ಕರೆಯು ಹೇಳಿದವನಿಗೆ ಹಿತಕರವಾದರೂ ಕೇಳಿದವನಿಗೆ ಕಿವು ಚುಚ್ಚುತ್ತೆ. ಹಾಗಾಗಿ ಪುರಭವನದಲ್ಲಿ ಹೇಳಹೊರಟ ಬೇಸರಕಾರನನ್ನೂ ತಪ್ಪಿಸಿಕೊಳ್ಳುವುದು, ತಾವು ಹೇಳಹೊರಟಾಗ ಕೇಳುಕಾರನು ತಪ್ಪಿಸಿಕೊಳ್ಳದಂತೆ ಮಾಡುವುದು ಇವೇ ದೊಡ್ಡ ಸಮಸ್ಯೆ ಆಗಿದೆ. ಮೊನ್ನೆ ನಾನಲ್ಲಿಗೆ ಹೋದಾಗ ಹೆಬ್ಬಿ ರಂಗಯ್ಯನನ್ನು ನೋಡಿದೆ. ಅವನು ಒಂದು ಚತುರತೆಯಿಂದ ಹೇಳಿಕೆಗಾರರ ಬಲೆ ತಪ್ಪಿಸಿಕೊಳ್ಳು ವುದನ್ನು ನಿಪುಣತೆಯಿಂದ ಸಾಧಿಸುತ್ತಿದ್ದಾನೆ. ನಿಮಗೂ ಎಂದಾದರೂ ಪ್ರಯೋಜ ನಕ್ಕೆ ಬರಬಹುದು ಎಂದು ಅದನ್ನೇ ಹೇಳುತ್ತೇನೆ.

ಯಾರಾದರೂ ಬೇಸರಪಡಿಸಲು ಆರಂಭ ಮಾಡಿದರೆ ರಂಗೈಯ್ಯನದೊಂದು ಗಾಂಢೀವ ಸಮಯ ನೋಡಿಕೊಂಡು "ಹೌದು ಸ್ವಾಮಿ, ತಾವು ಹೇಳಿದ್ದು ಸರಿ. ಅದರಿಂದಲೇ ನೋಡಿ ಈಗ ನಾನು ಆರ್ಥಿಕ ಮುಗ್ಗಟ್ಟಿಗೆ ಸಿಕ್ಕಿಬಿದ್ದೆ. ದಯವಿಟ್ಟು ಹತ್ತು ರೂಪಾಯಿ ಸಾಲ ಕೊಡುತ್ತೀರಾ" ಎಂದು ಬೇಸರಗಾರನ ಬಾಯಿಯು

ತಾನಾಗಿಯೇ ಒಣಗಿ ಹೋಗುವುದು. ಆತನು ಸುಧಾರಿಸಿಕೊಳ್ಳುವುದರೊಳಗೇ ರಂಗೈಯ್ಯನು ಮತ್ತೊಮ್ಮೆ ವಿಷವಾಯು ಪ್ರಯೋಗ ಮಾಡುತ್ತಾನೆ. "ಹಣವಿಲ್ಲದಿದ್ದರೆ ಕೆಡತು ಹಣಮುಂತಮಲ್ ನನಗೆ ಸಾಲ ಕೊಡುತ್ತಾನೆ, ಜಾಮಿೀನು ಕೊಟ್ಟರೆ ತಾವು ದಯವಿಟ್ಟು ಜಾಮಿೀನು ನಿಲ್ಲುವಿರಾ" ಎಂದು. ಬೇಸರಗಾರನು ಮೊದಲೇ ಬೇಸ್ತು ತಿಂದಂತಾಗಿರುವನು. ಈ ಜಾಮಿೀನು ಸುದ್ದಿ ಬರುತ್ತಲು ಜಾಮಿೀನು ನಿಲ್ಲುವುದಿರಲಿ ನೆಲದ ಮೇಲೆ ನಿಲ್ಲಲೂ ಆಗುವುದಿಲ್ಲ. ಹಾಗೆಯೇ ಕೈಕಾಲು ಕೆಡವಿಕೊಂಡು ಕೆಳಕ್ಕೆ ಬೀಳುವನು. ಹೀಗೆ ನಿರಸ್ತ್ರನಾದ ಶತ್ರುವನ್ನು ರಂಗೈಯ್ಯನು ಸುಮ್ಮನೆ ಬಿಡುವನೇ, ಎಂದಿಗೂ ಇಲ್ಲ. ಶತ್ರು, ರೋಗ, ರುಜಿನ ಇವುಗಳನ್ನು ಬುಡಸಹಿತ ನಿರ್ಮೂಲಗೊಳಿಸಬೇಕೆಂಬ ದೊಡ್ಡವರ ಮಾತಿಗೆ ಬೆಲೆಕೊಟ್ಟು, "ಹೋಗಲಿ ಸ್ವಾಮಿೀ, ಜಾಮಿೀನು ನಿಲ್ಲದಿದ್ದರೆ ಕೆಡತು, ನಿಮ್ಮನೆ ಬಾಡಿಗಗೆ ಕೊಡುತ್ತೀರಾ" ಎನ್ನುವನು, ಎದುರಾಳಿಯ ಮನಸ್ಸಿನಲ್ಲಿ ಒಮ್ಮೆಲೇ ಹೊಳೆಯುವುದು, ರಂಗೈಯ್ಯ ಮನೆಗೆ ಬಂದುದು ಗೋಡೆಯಲ್ಲೆಲ್ಲಾ ಮೊಳೆ ಹೊಡೆಯುವುದು. ಬಚ್ಚಲು ಮನೆ ಗೋಡೆ ಒದ್ದೆ ಮುದ್ದೆಯಾಗುವುದು, ಆರು ವರ್ಷ ಬಾಡಿಗೆ ಬಾಕಿ. ಕೋರ್ಟು ಕಛೇರಿ, ರಂಗೈಯ್ಯನನ್ನು ಮನೆ ಬಿಡಿಸುವ ವೇಳೆಗೆ ಮನೆ ಲಾಯರ ಪಾಲು, ಇತ್ಯಾದಿ ತೋರುವುದು. ಕೂಡಲೇ ಉಸಿರಾಡುವುದೂ ನಿಲ್ಲುವುದು. ರಂಗೈಯ್ಯನು ಗೆದ್ದನು. ದೇವದುಂದುಭಿಗಳು ಮೊಳಗುವರು, ಹಲ್ಲಿಗಳೆಲ್ಲಾ ದಿಕ್ಕು ದಿಕ್ಕಿನಿಂದ ಲೊಛೇ ಲೊಛೇಗುಟ್ಟುವುವು. ಕಡೆಗೆ ಪುರಭವನದ ಮೂಲೆ ಮೂಲೆಗಳಲ್ಲಿನ ಜೇಡನ ಪರೆಗಳೂ ಪರಪರಗುಟ್ಟುವುವು.

ಬೇಸರಗಾರ ನಿರ್ಮೂಲನ ಚತುರಾ ವಿಧಾನವನ್ನು ಮನಗಂಡ ನಾನು ಇದನ್ನು ಮೊದಲಬಾರಿ ವಿವರಿಸ ಹೋದಾಗ ಕುಪ್ಪಯ್ಯನು ಮೂರು ನಿಮಿಷಗಳಲ್ಲೇ ಹತ್ತು ರೂಪಾಯಿ ಸಾಲ ಕೇಳಿದ. ಓಹೋ ನನ್ನ ವಿದ್ಯೆ ಫಲಿಸಿತು ಎಂದು, ಅಲ್ಲಿಗೇ ಮುಕ್ತಾಯಮಾಡಿ ಬೆಪ್ಪಯ್ಯನನ್ನು ಹಿಡಿದು ಅವನಿಗೆ ಆರು ನಿಮಿಷ ಹೇಳಿದೆ. ಅವನು ನಾನು ಜಾಮಿೀನು ನಿಲ್ಲಲು ಸಾಧ್ಯವೇ ಅನಂಗ ಬ್ಯಾಂಕಿನಲ್ಲಿ ಎಂದು ಕೇಳಿದ. ಬ್ಯಾಂಕಿಗೆ ಯಾರು ಜಾಮಿೀನು ಎಂದು ನಾನು ಕೇಳಿದೆ, ಅವನ ಬೆಪ್ಪು ಬೆಪ್ಪಾದ. ಬೆಪ್ಪಯ್ಯನ ಮೇಲೆ ಬ್ರಹ್ಮಾಸ್ತ್ರವೇ ಎಂದುಕೊಂಡು ಅವನನ್ನು ಬಿಟ್ಟು ಅಪ್ಪಯ್ಯನನ್ನು ಹಿಡಿದೆ. ಅವನಿಗೆ ಹೇಳಹೋದಾಗ, ಅವನು ಸಾವಧಾನವಾಗಿ ಕೇಳಿದ. ಬೇಸರಪಟ್ಟಂತೂ ಕಾಣಲಿಲ್ಲ. ಇದೇನು ಇದರ ಮರ್ಮ ಎಂದುಕೊಳ್ಳುವಾಗ ಅಪ್ಪಯ್ಯ ಸಾವಧಾನವಾಗಿ ಸರಪಳಿಯಂತೆ ಸಿಗರೇಟು ಸೇದುತ್ತಿದ್ದುದು ಕಂಡುಬಂದಿತು. ಹಾಗೆಯೇ ನನ್ನ ಜೇಬಿನೊಳಗೆ ಕೈಬಿಟ್ಟೆ. ಸಿಗರೇಟ್ ಡಬ್ಬ ಜೇಬಿನಲ್ಲಿರಲಿಲ್ಲ. ಯಾವುದೋ ಮಾಯದಲ್ಲಿ ಯಾವುದೋ ಮರವಿನಲ್ಲಿ ನನ್ನ ಡಬ್ಬ ಹೊರಗೆ ತೆಗೆದಿದ್ದೆ. ಅದು ವಿನಾಶವಾಗುವ ತನಕ ಅಪ್ಪಯ್ಯ ಜಪ್ಪಯ್ಯ ಎಂದರೂ ಹೊರಡಲಿಲ್ಲ. ಇದು ನನಗೆ ತಿಳಿದಾಗ ಕಾಲಮಿೀರಿ ಹೋಗಿತ್ತು, ಸಿಗರೇಟೆಲ್ಲಾ ಬೂದಿಯಾಗಿತ್ತು.



(ಗಣಿತದ ಮೇಷ್ಟ್ರು ಗಡಿಯಾರ ರಿಪೇರಿ ಮಾಡುವವನ ಹತ್ತಿರ) "ನನ್ನ ಗಡಿಯಾರ ಸ್ವಾಮಿ........ಪ್ರತಿ ಅರ್ಧ ಘಂಟೆಗೆ ಹತ್ತು ನಿಮಿಷದಂತೆಯೂ.........ಅಂದರೆ ಪ್ರತಿ ಹದಿನೈದು ನಿಮಿಷಕ್ಕೆ ಐದು ನಿಮಿಷದಂತೆಯೂ ಮುಂದುವರಿದು ಘಂಟೆಗೆ ೩೦ ನಿಮಿಷ ವ್ಯಂದೋಡಿ, ೮॥ ಘಂಟೆಗೊಂದಾವರ್ತಿಯೇ ತನ್ನ ಅಕ್ಷದ ಮೇಲೆ ಸುತ್ತಿ........೨೪ ಘಂಟೆಗೆ ೭ ಘಂಟೆ ಜಾಸ್ತಿಯೇ ಇತರ ಗಡಿಯಾರಗಳಿಗಿಂತ ಮುಂದೋಡಿಸುತ್ತದೆ........ ಇದರ ಐಬೇನು ಕಂಡುಹಿಡಿಯಿರಿ......"

ಬೆರಣಿ ಬೀರಮ್ಮ

ಬೆರಣಿ ಬೀರಮ್ಮನಿಗೆ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ಮೈಸೂರಿನ ಸ್ಥಿತಿಗತಿಗಳು ಚೆನ್ನಾಗಿ ಗೊತ್ತು. ಅಂದಿನಿಂದ ಇಂದಿನವರೆಗೂ ಆಗಿರುವ ರೈಲು, ತಂತಿ, ಬಸ್ಸು, ಇನಾಕ್ಯುಲೇಷನ್, ವಿಮಾನ, ಇನ್‌ಫ್ಲುಯನ್ಜ್ ಮುಂತಾದುದನ್ನೆಲ್ಲ ಕುರಿತು ಅವಳು ಸದಾ ಹೇಳುತ್ತಿರುತ್ತಾಳೆ. ಆಗಿನ ಕಾಲದಿಂದ, ಅವಳು ಬೆರಣಿಯನ್ನೇ ಮಾರಿ ಜೀವನ ನಡೆಸುತ್ತಿದ್ದಾಳೆ. ಈಚೀಚೆಗೆ ಅವಳಿಗೆ ಲೆಕ್ಕಮಾತ್ರ ಕೊಂಚ ತಪ್ಪುತ್ತೆ. ಅದೂ ಕೂಡ, ಮರವೆಯಿಂದಲ್ಲ, ಮಾತಿನ ರಗಳೆಯಿಂದ.

"ಬೀರಮ್ಮಾ! ಎಷ್ಟಿದೆ ಬೆರಣಿ?" ಅಂದರೆ ಸರಿ, ಬಾಗಿಲ ಮುಂದೆ ನಿಂತು, "ಸುಮಾರು ನೂರು ಜೊತೆ ಇದೆ ಅಮ್ಮ" ಅನ್ನುತ್ತಾಳೆ. "ಚೆನ್ನಾಗಿ ಒಣಗಿದೆಯೋ?" ಅಂತ ನೀವು ಅನುಮಾನಿಸಿದರೆ, "ತುಪ್ಪ ಹುಯ್ದಹಾಗೆ ಉರೀತದೆ" ಅನ್ನುತ್ತಾಳೆ. "ಹಾಗಾದರೆ, ಒಂದು ಅರವತ್ತು ಜೊತೆ ಕೊಡು" ಅಂತ ನೀವು ಕುಕ್ಕೆ ಹಿಡಿದರೆ, ಬೀರಮ್ಮ, ಹೊರೆ ಇಳಿಸಿ, ಎಣಿಸುವುದಕ್ಕೆ ಪ್ರಾರಂಭ.

ಕೈಗೆ ಬೆರಣಿ ಬಂದ ಕೂಡಲೇ, ಬಾಯಿಗೆ ಬಡಾಯಿಯೂ ಹತ್ತುತ್ತದೆ.

"ಒಂದು, ಎರಡು, ಮೂರು, ನಾಲ್ಕು, ಐದು, ಆರು,............ ನಿಮ್ಮ ಸೊಸೇಗೆ ಎಷ್ಟು ಮಕ್ಕಳವ್ವಾ........?" "ಎಂಟು ಮಕ್ಕಳು" "ಒಳ್ಳೇದವ್ವಾ, ಚೆನ್ನಾಗಿ ಬಾಳಿ ಬದುಕಲಿ, ಎಂಟೂವೆ,...... ಒಂಬತ್ತು, ಹತ್ತು, ಹನ್ನೊಂದು, ಹನ್ನೆರಡು, ಹದಿಮೂರು, ಹದಿನಾರು,........ಇವತ್ತೆಷ್ಟವ್ವಾ ತಾರೀಕು......." "ಇಪ್ಪತ್ತಾರು, ಸಂಬಳ ಬರೋಕೆ, ಇನ್ನೂ ಐದು ದಿನ ಇದೆ". "ಇಪ್ಪತ್ತಾರಾಗೋಯ್ತಾ?........ಇಷ್ಟು ಬೇಗ?....... ಇಪ್ಪತ್ತೇಳು, ಇಪ್ಪತ್ತೆಂಟು, ಇಪ್ಪತ್ತೊಂಬತ್ತು, ಮುವತ್ತು....... ಅವ್ವಾ, ನಿಮ್ಮ ಹಿರೇ ಮಗನಿಗೆ ಸಂಬಳ ಎಷ್ಟವ್ವಾ? ಸಾಹೇಬ್ರಂಗೆ ಪರಂಗಿ ಟೋಪಿ ಹಾಕ್ತಾರಲ್ಲಾ.........?........ಎಷ್ಟವ್ವಾ ಸಂಬಳ?" "ಅಯ್ಯೋ, ಬಿಡು ಬೀರಮ್ಮ.......ಸಾವಿರಾರು ರೂಪಾಯಿ ಖರ್ಚುಮಾಡಿ ಓದಿ, ಕರೀ ಅಂಗಿ ಹಾಕ್ಕೊಂಡು, ಕೈ ಮುಗಿದ್ರೂವೆ, ತಿಂಗಳಿಗೆ, ಮೂವತ್ತೈದು ಕಾಗದದ ಚೂರು ತರುತ್ತಾನೆ". "ಹಾಗನ್ಬೇಡವ್ವಾ, ಮೂವತ್ತೈದು, ಕಡಿಮೆಯೇನಿಲ್ಲ , ಮೂವತ್ತಾರು, ಮೂವತ್ತೇಳು, ಮೂವತ್ತೆಂಟು, ಮೂವತ್ತೊಂಬತ್ತು........ಅವ್ವಾ ನೀವುಟ್ಟಿರೋ ಸೀರೆಗೆ ಎಷ್ಟವ್ವಾ ಬೆಲೆ?" "ಅಯ್ಯೋ........ಈಗಿನ ಬೆಲೆ ಏನು ಕೇಳ್ತೀಯ, ಬೀರಮ್ಮಾ ... ಜರೀದಲ್ಲಾ, ಗಿರೀದಲ್ಲಾ, ಆದ್ರೂ ನೋಡು, ನಲವತ್ತಾರು ರೂಪಾಯಿ ಕೊಟ್ಟು ತಂದಿದಾರೆ ನಮ್ಮವರು." "ನಲವತ್ತಾರು ರೂಪಾಯೇ?....... !! ....ನಿಮ್ಮಂತಹ ಪುಣ್ಯವಂತರು ಕೊಡಬಹುದು, ಉಡಬಹುದು.......ನಲವತ್ತಾರು, ನಲವತ್ತೇಳು, ನಲವತ್ತೆಂಟು.......ಲೆಕ್ಕ ನೋಡ್ಕೋಯವ್ವಾ, ನನ್ನ ಹಾಳು ಮರವೇಲಿ, ಬೆರಣಿ ಲೆಕ್ಕ ಕಡಿಮೆ ಬಂದೀತು,....... ನಲವ

ತ್ತೊಂಬತ್ತು, ಐವತ್ತು ...... ನಿಮಗೆ ಎಷ್ಟವ್ವಾ ವಯಸ್ಸು?'', "ಅಯ್ಯೋ ಅದನ್ನು ಕಟ್ಟಿಕೊಂಡೇನು ಬೀರವ್ವ ......? ಹಾಕು ಬೆರಣಿ......." "ಅದಕ್ಕಲ್ಲವ್ವಾ, ನಿಮ್ಮ ಹಾಗೇ ನನಗೊಬ್ಬಳು ಮಗಳಿದ್ದಳು, ಹುಟ್ಟಿದ ಮೂರು ತಿಂಗಳಲ್ಲೇ ಸತ್ತೋದ್ಳು, ಅವಳಿದ್ದಿದ್ದರೆ ಈಗ ಅವಳಿಗೆ ಎಷ್ಟು ವಯಸ್ಸಾಗಿರ್ತಿತ್ತೂಂತ ತಿಳ್ಕೊಳ್ಳೋಕೆ ತಾಯಿ, ನಾ ಕೇಳಿದ್ದು.... ...''. "ನನಗೀಗ, ಐವತ್ತೈದು-ಐವತ್ತಾರು ಇರಬಹುದು'' ''ಹಂಗಾ? ....ಐವತ್ತೈದು, ಐವತ್ತಾರು, ಐವತ್ತೇಳು, ಐವತ್ತೆಂಟು, ಐವತ್ತೊಂಬತ್ತು, ಅರವತ್ತು ....ನೋಡ್ಕೊಳ್ಳಿ ಅವ್ವಾ, ಕೊಸರಿಗೇಂತ ಇನ್ನೊಂದು ಜೊತೆ ಹಾಕಿದೀನಿ."

ಹೀಗೆ ಬೆರಣಿ ಕೊಟ್ಟು ಬೀರವ್ವ ಹೊರಟುಹೋದ ಮರುದಿನ, ಆ ಮನೇಲಿ ಅತ್ತೆಗೂ, ಸೊಸೆಗೂ ಜಗಳ. "ನಿನ್ನೆ ತಾನೇ ಅರವತ್ತು ಜೊತೆ ಸೊಗಸಾದ ಬೆರಣಿ ಬೀರವ್ವ ಎಣಿಸ್ಕೊಟ್ಟಿಟ್ಟು ಹೋದ್ಳು ನಾನೇ ನಿಂತು ಹಾಕಿಸ್ಕೊಂಡಿದೀನಿ, ನನ್ನೆದುರಿಗೇ ಎಣಿಸಿದಾಳೆ, ಅದನ್ನೆಲ್ಲಾ, ಸಿಕ್ಕಾಪಟ್ಟೆ ಉರಿಸಿಬಿಟ್ಟು ಬೆರಣಿಯೇ ಇಲ್ಲಾಂತ ಬೊಂಬ್ಡಿ ಬಾರಿಸ್ತಾಳಲ್ಲಾ ಈ ಬಣ್ಣದ ಬೀಸಣಿಗೆ......." ಅಂತ ಐವತ್ತೈದು, ಐವತ್ತಾರು ವಯಸ್ಸಿನ ಅತ್ತೆ, ಆರ್ಭಟಿಸುವಳು.

———o———

ನಾನು ಸತ್ತದ್ದು

ಕೇಳಿದರೆ ಆಶ್ಚರ್ಯವಾಗುತ್ತದೆ. ಅನೇಕರು ನಂಬುವುದೇ ಇಲ್ಲ. ಬಿಡ್ರಿ, ಬಿಡ್ರಿ, ಅಂದುಬಿಡುತ್ತಾರೆ. ಎಲ್ಲಾದರೂ ಉಂಟೆ, ಅಂತ ಮೂಗೆಳೆಯುತ್ತಾರೆ. ಆದರೂ, ನಿಜ. ಇವತ್ತಿಗೂ ನಡೆಯುತ್ತಾ ಇವೆ. ನಾಳೇನೂ ನಡೆಯುತ್ತದೆ.

ಏನೂ ಅಂತೀರೋ? ಪೇಪರುಗಳಲ್ಲಿ ಯಾವುದಾದರೂ ಒಂದು ಔಷಧಿ ಜಾಹಿರಾತು ಓದಿದೆ ಅನ್ನಿ, ನಾನು, ಕೂಡಲೇ ಆ ಜಾಹಿರಾತಿನಲ್ಲಿ ಹೇಳಿರುವ ಖಾಯಿಲೆಗಳೆಲ್ಲವೂ ನನಗೆ ಬಂದಿರುವ ಹಾಗೆ ನನಗೆ ಭಾಸವಾಗುತ್ತದೆ. ಆತ ಆ ಜಾಹಿರಾತಿನಲ್ಲಿ ನಮೂದಿಸಿರುವ ಪಾಪಿ ಪ್ರಾಣಿ ನಾನೇ ಅಂತ ನನಗೆ ಅನ್ನಿಸಿ ಬಿಡುತ್ತದೆ. ಆತ ಕೊಟ್ಟಿರುವ ವಿವರಣೆಗಳೆಲ್ಲ ನನ್ನ ಅನಾರೋಗ್ಯದ ವಿವರಣೆ ಅಂತ ನನಗೆ ತೋರಿಬಿಡುತ್ತದೆ. ಮೂಲ, ಗಸೆ, ಕ್ಷಯ, ಕೆಮ್ಮು, ಆಮಶಂಕೆ, ಬಿಳುಪು, ಲಕ್ವ, ಅಜೀರ್ಣ, ರಕ್ತ ಯಕೃತ್, ಹುಳುಕಡ್ಡಿ, ತೊಡೆಬಾಳೆ ಮುಂತಾದ ಗುಪ್ತ ಹಾಗೂ ಬಹಿರಂಗ ವ್ಯಾಧಿಗಳೆಲ್ಲ ನನ್ನಲ್ಲಿದ್ದ ಹಾಗೆ ಸಂಕಲ್ಪಮಾಡಿಕೊಂಡು ನೂರಾರು ರೂಪಾಯಿ ತೆತ್ತು ಗುಳಿಗೆಗಳನ್ನು ನುಂಗಿದೇನೆ; ಮುಲಾಮುಗಳನ್ನು ಹಚ್ಚಿಕೊಂಡಿದೇನೆ; ತೈಲ, ಆಸವ ಚೂರ್ಣ, ಘೃತಗಳನ್ನು ಸೇವಿಸಿದ್ದೇನೆ; ಓಜನ್ನುಗಳನ್ನೂ, ಆಯಿಲ್‌ಗಳನ್ನೂ, ಆಮ್ಯಾಲ್ಟ್‌ಗಳನ್ನೂ, ಗಂಟಲೊಳಕ್ಕೆ ಇಳಿ ಬಿಟ್ಟಿದೇನೆ.

ಪೇಪರುಗಳಲ್ಲಿ ಬರುವ ಜಾಹಿರಾತುಗಳು ಹಾಗಿರಲಿ. ಪುಸ್ತಕಗಳನ್ನು ಬಿಚ್ಚಾದರೂ ಕೂಡ ನಾನು ಈಚೆಗೆ ಬೆಚ್ಚಿಬೀಳುತ್ತಿದೇನೆ. ಯಾವುದಾದರೂ ಕಾದಂಬರಿಯಲ್ಲಿ ಕಥಾನಾಯಕನಿಗೆ ಕಾಲು ಉಳುಕಿದ್ದನ್ನು ಗ್ರಂಥಕರ್ತ ವಿವರಿಸಿದ್ದರೆ ಅದನ್ನು ಓದುವಾಗ ನನಗೂ ಯಾಕೋ ಕಾಲು ನೀಡುವುದಕ್ಕಸಾಧ್ಯವಾಗುತ್ತದೆ. ನಾಯಕನ ಮನದನ್ನೆಗೆ ಮಹೋದರ ಬಂದರೆ, ನನ್ನ ಹೊಟ್ಟೆಯೂ ಕೊಂಚ ತಕರಾರು ಮಾಡುತ್ತದೆ.

ಕೆಲ ದಿನಗಳ ಹಿಂದೆ ನಾನು ಪಬ್ಲಿಕ್ ಲೈಬ್ರರಿಗೆ ಹೋಗಿದ್ದೆ. ಹಾಳು ನನ್ನ ಕಣ್ಣು ಒಂದು ವೈದ್ಯ ಗ್ರಂಥದ ಮೇಲೆ ಹೋಗಿ ಬಡಿಯಬೇಕೆ? ಅದನ್ನ ಎದುರಿಗಿರಿಸಿ ಕೊಂಡು ಶೀತ ಜ್ವರದ ವಿಷಯವನ್ನೇ ನಾನು ಓದಬೇಕೆ? ಓದುತ್ತಾ ಓದುತ್ತಾ, ಆ ಜ್ವರದ ಆವಿರ್ಭಾವದ ಸೂಚನೆಗಳೆಲ್ಲವೂ ನನ್ನಲ್ಲೇ ಇದ್ದಂತೆ ನನಗೆ ತೋರಿತು. ತಲೆ ನೋವು, ಗಂಟಲು ಕೆರೆತ, ಮೈ ಕೈ ನೋವು, ಆಹಾರದಲ್ಲಿ ಅಸಡ್ಡೆ, ಕೆಳ ಹೊಟ್ಟೆಯಲ್ಲಿ ಕಿರುಕುಳ, ಮುಂತಾದ ಪೂರ್ವ ಸೂಚನೆಗಳೆಲ್ಲವೂ ನನ್ನ ದೇಹದಲ್ಲೂ ಇದ್ದುವು ಹೆದರಿಕೆಯಿಂದ ನಾನು ಬೆವರಿದೆ; ಮುಖದಲ್ಲಿ ಬಿಳುಪೇರಿತು. ಶೀತ ಜ್ವರಕ್ಕೆ ಮಾಡಬೇಕಾದ ಔಷಧೋಪಚಾರಗಳನ್ನೂ ಕೂಡ ಓದಿ ತಿಳಿದುಕೊಳ್ಳಲು ತಾಳ್ಮೆ ಇರಲಿಲ್ಲ. ತಲೆ ತಿರುಗಿತು; ಬಾಯೊಣಗಿತು; ಗಂಟಲು ಕೆರೆಯಿತು. ಮೊಳಕಾಲು ಮೊಳಕೈಗಳಲ್ಲಿ ವಿಪರೀತ ನೋವು ಕಾಣಿಸಿತು.

ಬಿರುಬಿರನೆ ಪುಸ್ತಕದ ಪುಟಗಳನ್ನು ಮಗುಚಿದೆ. ಖಾಯಿಲೆಗಳೂ ಜ್ವರ ಗಳೂ ಒಂದೊಂದಾಗಿ ನನ್ನ ಕಣ್ಣಮುಂದೆ ಹರಿದು ಹೋಯಿತು. ಡೆಂಗ್ಯೂ ಎಂಬ ಜ್ವರದ ಲಕ್ಷಣಗಳೂ ನನ್ನಲ್ಲಿದ್ದುವೆಂದು ತಿಳಿದುಕೊಂಡೆ. ಇನ್ನೊಂದೆರಡು ವಾರಗಳಲ್ಲಿ ನನ್ನ ಸ್ಥಿತಿ ವಿಷಮಿಸಬಹುದೆಂದು ಅದರಲ್ಲಿ ಬರೆದಿತ್ತು. ಹೆರ್ನಿಯಾವಿಗೆ ತೀರ ಹತ್ತಿರ ಹತ್ತಿರವೆಂದೂ, ಕಾಲರಾದಲ್ಲಿ ಕಾಣಿಸುವ ವಾಂತಿಯ ಪ್ರಥಮ ಚಿಹ್ನೆಯಾದ ವಾಕರಿಕೆ ನನಗೆ ಆಗಾಗ ಬರುವುದುಂಟೆಂದೂ, ಡಿಫ್ತೀರಿಯಾ ಎಂಬ ಹಾಳು ಖಾಯಿಲೆ ಸದಾ ನನ್ನ ಬೆನ್ನು ಹತ್ತಿಕೊಂಡೇ ಬಂದಿದೆ ಎಂದೂ ಭಾಸ ವಾಯಿತು. ಡಿಫ್ತೀರಿಯಾದಲ್ಲಿ ಇದ್ದೇ ಇರಬೇಕಾದ ಕಿರುನಾಲಿಗೆಯ ಬಿಳುಪು ನನಗೂ ಕೊಂಚ ಇತ್ತೆಂದು ಕನ್ನಡಿ ಮುಂದೆ ಬಾಯಿ ತೆರೆದಾಗ ನನಗೆ ಸ್ಪಷ್ಟ ವಾಯಿತು. ಅಯ್ಯೋ ಎಂದು ನಾನು ಕನ್ನಡಿ ಮುಂದೆ ಗೋಳಿಟ್ಟೆ. ಆಗ, ಆ ಬಿಳುಪು ಇನ್ನೂ ಸ್ಪಷ್ಟವಾಗಿ ಕಾಣಿಸಿತು. ಹಾಗೆಯೇ ಇಡೀ ಪುಸ್ತಕವನ್ನು ಓದಿ ಮುಗಿಸುವುದರೊಳಗೆ ಮಾನವ ಪ್ರಾಣಿಯಲ್ಲಿ ಪುರುಷವರ್ಗಕ್ಕೆ ಬರಬಹುದಾದ ಎಲ್ಲಾ ಖಾಯಿಲೆಗಳೂ ನನ್ನಲ್ಲಿ ಪ್ರಬಲವಾಗಿಯೋ ಅಬಲವಾಗಿಯೋ ಬೇರೂ ರಿಯೋ ಚಿಗುರಿಯೋ ನೆಲೆಯಾಗಿ ನಿಂತುಬಿಟ್ಟಿವೆ ಎಂದು ನಿರ್ಧಾರವಾಯಿತು. ಸ್ತ್ರೀ ಸಹಜವಾದ ಕೆಲವು ಖಾಯಿಲೆಗಳ ಹೆಸರುಗಳನ್ನೋದಿದಾಗ, ಅವೂ ಕೂಡ ನನ್ನಲ್ಲಿದ್ದಿದ್ದರೆ ನನ್ನ ವ್ಯಕ್ತಿತ್ವವೂ ಮಹತ್ವಾಕಾಂಕ್ಷೆಯೂ (ಈ ಮಾತುಗಳು ಸಮಂಜಸವಲ್ಲದಿದ್ದರೆ ವಾಚಕರು ಬೇರೆ ಪದಗಳನ್ನು ಸೇರಿಸಿ ಓದಿಕೊಳ್ಳಬಹುದು)

ಪರಿಪೂರ್ಣವಾಗುತ್ತಿತ್ತೆಂದು ನನಗೆ ತೋರಿತು. ಆ ಪುಸ್ತಕದಲ್ಲಿ ಕಡೆಯ ರೋಗವೇ ಪ್ರದರ. ಅವರ ಮುನ್ನೋವುಗಳೂ ನನ್ನಲ್ಲಿದ್ದುದರಿಂದ, ನಾನು ಅದರ ವಿಷಯ ವನ್ನೂ ಓದಿ ತಿಳಿದು ಪುಸ್ತಕವನ್ನು ಮುಚ್ಚಿ, ಗುಮಾಸ್ತೆಯವರಿಗೊಪ್ಪಿಸಿ ಮನೆಗೆ ಬಂದೆ.

ಹೋಗಿ ಯಾವುದಾದರೂ ಮೆಡಿಕಲ್ ಕಾಲೇಜಿನಲ್ಲಿ ಮಲಗಿಬಿಡಬೇಕೆನಿಸಿತು. ಅಲ್ಲಿ ಓದುವ ಹುಡುಗರಿಗೆ ನಾನೇ ಒಂದು ಆಸ್ಪತ್ರೆ. ನೂರಾರು ಹಾಸಿಗೆಗಳನ್ನು ಹರಡಿ ಅವುಗಳಲ್ಲೆಲ್ಲಾ ರೋಗಿಗಳನ್ನು ತುಂಬಿ ತುಂಬಿ, ತಮ್ಮ ಕಲಿಕೆಗೋಸ್ಕರ ಅವರ ಬಾಯೊಳಗೆ ತೆರ್ಮಾಮಿಟರುಗಳನ್ನು ತುರುಕಿ ಅವರನ್ನು ಚುಚ್ಚಿ ಕರೆದು ಕಡಿದು ಕುಯ್ದು ಪೀಡಿಸುವುದಕ್ಕಿಂತ, ಸರ್ವರೋಗ ಸಂಪತ್ತಿನಲ್ಲಿ ಸದಾ ಸೀದು ಹೋಗುತ್ತಿರುವ ನಾನು ಅಲ್ಲಿಗೆ ಹೋದೆನೆಂದರೆ, ಅವರು ನನ್ನ ಸುತ್ತ ನಾಲ್ಕು ಸಾರಿ ಸುಳಿದಾಡಿ ಡಿಗ್ರಿಪಡೆಯಬಹುದಲ್ಲಾ, ಅಂತ ಅನ್ನಿಸಿತು. ಆ ಮೇಲೆ, ಛೆ! ಅಲ್ಲಿ ಇರುವವರಿಗೆ ನನ್ನಷ್ಟು ದೂರದೃಷ್ಟಿಯೂ ಮಿತವ್ಯಯದ ಮೇಲಿನ ಆಸೆಯೂ ಇರಲಾರದು. ನನ್ನನ್ನ ಹುಚ್ಚಾ ಅಂತ ಓಡಿಸಿದರೂ ಓಡಿಸಿಬಿಟ್ಯಾರು, ಎಂದು ಸುಮ್ಮನಾದೆ.

ಆಗ ನನ್ನ ಆಕೆ ಹತ್ತಿರ ಬಂದು 'ಊಟಕ್ಕೆ ಏಳಿ' ಅಂದಳು. ಬರುತ್ತೇನೆ, ಅಂತ ಆಕೆಯನ್ನು ಆಚೆಗೆ ಕಳುಹಿಸಿ, ನನ್ನ ಆಯುಷ್ಯದ ಪರಿಮಾಣವನ್ನು ಅಂದಾಜು ಮಾಡಲು ಪ್ರಾರಂಭಿಸಿದೆ. ಬಲಗೈಯನ್ನು ಎಡಗೈಯಿಂದ ಹಿಡಿದು ಪಲ್ಸ್ ನೋಡಿದೆ. ಎಡಗೈ ಪಲ್ಸ್ ನೋಡಿದೆ. ಮೊದಲು ರಕ್ತಚಲನದ ಸೂಚ ನೆಯೇ ಸಿಗಲಿಲ್ಲ. ಕಡೆಗೆ ಟಕ್ ಟಕ್ ಅಂತ ಏನೋ ಒಂದು ಆಗುತ್ತಿರುವ ಹಾಗೆ ತೋರಿತು. ಗಡಿಯಾರ ಹಿಡಿದುಕೊಂಡು ಎಣಿಸಿದೆ. ನಿಮಿಷಕ್ಕೆ ೧೪೭ ಅಂತ ಗೊತ್ತುಮಾಡಿಕೊಂಡೆ. ಹೃದಯದ ಮೇಲೆ ಕೈ ಇಟ್ಟೆ. ಹಾಳು ಹೃದಯ ನಿಂತೇಬಿಟ್ಟಿತು. ಸತ್ತೇ ಅಂತ ಕಿರಿಚೋಣವೋ ಅಂತ ಅನುಮಾನಿಸಿದೆ. ಒಳಗಿರು ವವಳ ಬಾಯಿಬಡಿತಕ್ಕೆ ಹೆದರಿ ಸುಮ್ಮನಾದೆ. ಬೆನ್ನ ಮೇಲೆ ಎಡಭಾಗವಾಗಿ ಗುದ್ದಿದರೆ ಹೃದಯ ಮತ್ತೆ ಬಡಿಯಲು ಉಪಕ್ರಮಿಸಬಹುದೆಂದು ತೋರಿತು. ಬಲಗೈಯನ್ನು ಮಡಿಸಿ ಬೆನ್ನ ಮೇಲಿಟ್ಟು ಆದಷ್ಟು ಬಲವಾಗಿ ಎಡಮಗ್ಗುಲಲ್ಲಿ ಗುದ್ದಿದೆ. ಒಳಗೆ ಏನೋ ಒಂದು ಅವಾಂತರವಾದ ಹಾಗೆ ತೋರಿತು. ನಾಲಿಗೆ ನೀಡಿದೆ, ಅದರ ತುತ್ತತುದಿ ಕೊಂಚ ಕೆಂಪಗೆ ಕಾಣಿಸಿತು. ಒಂದು ಕಣ್ಣನ್ನು ಮುಚ್ಚಿ ಮತ್ತೊಂದರಿಂದ ನೋಡಿದೆ. ಕೆಂಚಗೆ ಕಾಣಿಸಿತು. "ದೇವರೇ! ನನ್ನ ಪ್ರಾಣ ಉಳಿಸಪ್ಪ" ಅಂತ ಕೂಗಿಕೊಂಡೆ. ಎದ್ದೆ; ನನ್ನ ಕುರ್ಚಿಯೊಳಕ್ಕೆ ಧುಂ ಧುಂ ಅಂತ ಬಿದ್ದೆ. ಮೂರ್ಛೆ ಹೋದೆ. ಇನ್ನೂ ಮೂರ್ಛೆ ತಿಳಿದು ಎದ್ದಿಲ್ಲ. ಹಾಗೆಯೇ ಮಲಗಿದೇನೆ.

—ನಾ. ಕ.

"ಅವತ್ತು ರಾತ್ರಿ ನಡೆದದ್ದು"

ಈಗ ಬೀದಿಯಲ್ಲಿ ಹೋಗುತ್ತಿರಬೇಕಾದರೆ ಬಹಳ ಹುಷಾರಿ ನಾನು; ಇನ್ನು ಮತ್ತೆ ಆ ಶನಿ ವಕ್ರಿಸಿಬಿಟ್ಟರೆ... ....? ಆ ದಿನವಂತೂ ಜೀವ ಉಳಿಸಿಕೊಂಡು ಪಾರಾದೆ! ಇನ್ನು ಪುನಃ ಸಿಕ್ಕಿದರೆ ಬಿಡುತ್ತಾನೆಯೇ? ಅವನನ್ನು ನೋಡಿದ ಕೂಡಲೇ—ಅಥವಾ ನೋಡುವುದಕ್ಕೆ ಮೊದಲೇ—ನಾನು ಬಂದ ದಾರಿಯಲ್ಲೇ ಮಿನಿಟಿಗೆ ಒಂದು ಮೈಲಿಯಂತೆ ನಡೆದುಬಿಟ್ಟಿರುತ್ತೇನೆ...... ಸಾರ್ಜೆಂಟ್ ಕಂಡ ಸಿಪಾಯಿಸಂತೆ—

ಅಬ್ಬಾ! ಬೆನ್ನು ದವಡೆ ಎಲ್ಲಾ ಇನ್ನೂ ನೋಯುತ್ತಾ ಇದೇರೀ! ಅವತ್ತು ರಾತ್ರಿ ನಡೆದದ್ದು ಜ್ಞಾಪಿಸಿಕೊಂಡರೆ ಹೆದರಿಕೆಯಿಂದ ನಡುಗಿ ಪ್ರಾಣವುಳಿಯುವುದೇ ಸಂದೇಹವಾಗಿಬಿಡುತ್ತೆ ಒಂದೊಂದು ಸಲ... ....

ಹೆಚ್ಚೇನೂ ನಡೆಯಲಿಲ್ಲ ಸ್ವಾಮಿ. ಅರ್ಜೆಂಟಾಗಿ ತುಮಕೂರಿಗೆ ಹೋಗ ಬೇಕಾಗಿತ್ತು ಅವತ್ತು! ರೈಲು ಹತ್ತಿ ಕೂತೆ! ಗಾಡಿಗೆಲ್ಲ ನಾನೊಬ್ಬ, ನನ್ನೆದುರಿಗೆ ಜರಿ ರುಮಾಲಿನ ದೊಡ್ಡ ಮನುಷ್ಯರೊಬ್ಬರು, ಇಬ್ಬರೇ ಇದ್ದದ್ದು. ಅವರನ್ನು ನಾನು ಮಾತನಾಡಿಸುವ ತಂಟೆಗೇ ಹೋಗುತ್ತಿರಲಿಲ್ಲ! ಆದರೂ ಗ್ರಹಚಾರ ಕಡಿಮೆಯಾಗಿ—

"ಯಾವೂರಿಗೆ ಸ್ವಾಮಿ?" ಎಂದು ಕೇಳಿದೆ.

"ತುಮಕೂರಿಗೆ" ಎಂದರು!

ಆಗ ನನಗೆ ಒಂದು ಪ್ಲಾನು ಹೊಳೆಯಿತು ಸ್ವಾಮಿ ಅಪರೂಪವಾಗಿ! ನನಗೆ ತುಮಕೂರಿನಲ್ಲಿ ಒಪ್ಪತ್ತಿನ ಕೆಲಸ ಇತ್ತು ಅಷ್ಟೆ! ಅಲ್ಲಿಗೆ ಹೋಗುವ ತನಕ ಇವ ರೊಡನೆ ಮಾತನಾಡುತ್ತಿದ್ದು, ಅವರ ಸ್ನೇಹಾರ್ಜನೆ ಮಾಡಿ, ಅವರಿಗೆ ಸಹಾಯ ಮಾಡುವವನಂತೆ ನಟಿಸಿದರೆ—ಒಪ್ಪತ್ತಿನ ಊಟಕ್ಕೆ ಅವರ ಮನೆಯಲ್ಲೇ ಠಿಕಾಣಿ ಹಾಕಬಹುದು; ದುಡ್ಡು ಕೂಡ ಮಿಗುತ್ತೆ ಅಂತ ಅನಿಸಿತು ನನಗೆ. ಹಾಳು, ಮನುಷ್ಯ ಸ್ವಭಾವ ಅನ್ನಿ! ಸರಿ ಹಾಗೇ ಮೆಲ್ಲಗೆ ಗೋರ್ಲ ಹೊಡೆಯುವುದಕ್ಕೆ ಶುರು ಮಾಡಿದೆ.

"ಅದೇನು ಬೆಂಗಳೂರಿಗೆ ದಯಮಾಡಿಸಿದ್ದರಲ್ಲ?" ಎಂದೆ.

"ಇನ್ನೇನೂ ಇಲ್ಲ, ಕರಿಘಟ್ಟ ಕೃಷ್ಣಯ್ಯಂಗಾರ್ ಅಂತ—ನೀವು ಕೇಳೇ ಇರಬೇಕು ಅವರ ಹೆಸರನ್ನ—ಅವರ ಮೇಲೆ ಒಂದು ವ್ಯಾಜ್ಯ ಇತ್ತು; ಅದಕ್ಕೋ ಸ್ಕರ ಕೋರ್ಟಿಗೆ ಬಂದಿದ್ದೆ"

ಅಂದ ಮೇಲೆ ಅವರಿಬ್ಬರಿಗೂ ಮನಸ್ತಾಪವಿರಲೇ ಬೇಕೆಂದು ನನ್ನ ಚಾಣಾಕ್ಷ ಬುದ್ಧಿಗೆ ತಕ್ಷಣ ಹೊಳೆಯಿತು! ನಾನು ಕೃಷ್ಣಯ್ಯಂಗಾರ್ಯರ ವಿಚಾರವನ್ನ ಅವರಿವ ರಿಂದ ಕೇಳಿ ತಿಳಿದಿದ್ದೆ. ಆದರೂ ಅದನ್ನು ಎಳೆದು, ಹಿಗ್ಗಿಸಿ, ತಗ್ಗಿಸಿ, ತಿರುಗಿಸಿ ದೊಡ್ಡ ಮನುಷ್ಯರೆದುರಿಗೆ ತೋರಿಸುವ ಧೈರ್ಯ ಮಾಡಿದೆ!

"ಓಹೋ! ಅವನೇನು ಸ್ವಾಮಿ ಥಾಂಡಿಗ! ಎಷ್ಟು ಜನರ ಮನೆ ಹಾಳು ಮಾಡಿದಾನೋ ಚಂಡಾಲ!! ನೀವೂ ಅವನ ಕೈಗೆ ಸಿಕ್ಕಿಬಿಟ್ಟಿರ! ಅಯ್ಯೋ ಪಾಪ!" ಎಂದೆ.

ನನ್ನ ಔಷಧಿ ಅಷ್ಟು ಪ್ರಯೋಜನವಾಗುವುದೆಂದು ನಾನೇ ಊಹಿಸಿರಲಿಲ್ಲ! ಅವರು ಮಲಗುವುದಕ್ಕೆ ಸಿದ್ಧತೆ ಮಾಡುತ್ತಿದ್ದವರು, ತಕ್ಷಣ ಎದ್ದು ಕುಳಿತು ಕುತೂಹಲದಿಂದ, "ಹಾಗಾದರೆ ಅವರ ವಿಷಯ ನಿಮಗೆ ಚೆನ್ನಾಗಿ ಗೊತ್ತಿರಬೇಕು, ಹೇಳಿ, ಹೇಳಿ!" ಎಂದರು.

"ಅಯ್ಯೋ; ಏನು ಹೇಳೋದೋ ಸ್ವಾಮಿ, ಪರನಿಂದೆ ಅನ್ನೋದು ಕೆಟ್ಟದ್ದು! ಆದರೆ ಆ ಪಾಪಿ ವಿಚಾರದಲ್ಲಿ ಮಾತ್ರ ಅದು ಒಳ್ಳೇದೆ! ನೋಡಿ, ನಾವಿಬ್ಬರೂ ಒಟ್ಟಿಗೇ ಓದಿದವರು; ಕ್ಲಾಸಿನಲ್ಲಿ ನನ್ನಂತಹ ಸಭ್ಯಸ್ಥನಿಲ್ಲ, ಅವನಂತಹ ಪುಂಡುಪೋಕರಿ ಇಲ್ಲ; ನಾವಿಬ್ಬರೂ ಜೊತೆ! ಹಿತ್ತಲಿನಿಂದ ಹಣ್ಣು ಕದಿಯೋದು, ಮನೆಗಳಿಗೆ ಕಲ್ಲು ಎಸೆಯೋದು, ಹೀಗೆ ಪ್ರಾರಂಭವಾಯ್ತು ಅವನ ಚೇಷ್ಟೆ! ಬರುಬರುತ್ತ ಅದು ವಿಪರೀತವಾಯ್ತು; ಬಡವರ ಗುಡಿಸಿಲಿಗೆ ಬೆಂಕಿ ತಗುಲಿಸಿ ಪರಾರಿ ಮನುಷ್ಯ! ಅವರಪ್ಪ ದೊಡ್ಡ ಮನುಷ್ಯ. ನಾನು ಇವನನ್ನು ಹಿಡಿದುಕೊಟ್ಟರೆ ಅವನ ತಂದೆಗೆ ಕೆಟ್ಟ ಹೆಸರು ಅಂತ ನಾನೂ ಯಾರಿಗೂ ಹೇಳುತ್ತಿರಲಿಲ್ಲ! ಹೀಗೇ ಬೆಳೆದೆವು ಸಂಗಾತಿಯಾಗಿ........

"ಈಗ ಏಳೆಂಟು ವರ್ಷಗಳ ಹಿಂದೆ ಮದುವೆಯೂ ಆಯ್ತು; ಕೆಲಸವೂ ಆಯ್ತು; ಆದರೆ ಅವನ ಕೆಟ್ಟ ಚಾಳಿ ನಿಂತಿರಲಿಲ್ಲ; ಅವನಿದ್ದ ವೀರಭದ್ರ ಬ್ಯಾಂಕಿನಿಂದ ನಾಲ್ಕು ಸಾವಿರ ರೂಪಾಯಿ ದೋಚಿಬಿಟ್ಟ; ಆದರೆ ಬಚಾಯಿಸಿಕೊಳ್ಳಲಾರದೆ ಗೃಧ್ರು ಸಿಕ್ಕಿಬಿಡ್ತು; ಕೈಗೆ ಬೇಡಿ ಬೀಳುವುದೊಂದು ಬಾಕಿ. ಆಗ ಅವರಪ್ಪ ತಲೆ ಹಾಕಿ ಹೇಗೋ ಹೇಗೋ ಸರಿ ಮಾಡಿಬಿಟ್ಟರು; ಬಹಳ ಜನಕ್ಕೆ ಈ ವಿಷಯ ಗೊತ್ತಿಲ್ಲ ಈಗಲೂ!" ಎಂದು ಹೇಳಿ ನಿಲ್ಲಿಸಿದೆ.

"ಹೌದರೀ, ಆ ವಿಷಯ ನಮಗೆ ಗೊತ್ತೇ ಇರಲಿಲ್ಲ!"

"ಇದಾದ ಒಂದು ವರ್ಷಕ್ಕೇ ಆ ರತ್ನಸೆಟ್ಟಿ ಖೂನಿ ನಡೆದದ್ದು! ಆಗ ಪಾಪ ಯಾರನ್ನೋ ಕರೆದುಕೊಂಡು ಹೋಗಿ ಜೈಲಿಗೆ ಸೇರಿಸಿದರು! ನಿಜವಾಗಿ— ಯಾರಿಗೂ ಹೇಳಬೇಡಿ ಸ್ವಾಮಿ—ಅದನ್ನು ನಡೆಸಿದವನು ಈ ನರಾಧಮನೇ!"

"ಆಹಾ!........" ಎಂದರು ಕುತೂಹಲರಾಗಿ!

"ಅಷ್ಟಕ್ಕೇ ಸುಮ್ಮನಾಗಲಿಲ್ಲ ಸ್ವಾಮಿ ಆ ಮಾರೀಚ; ಎದುರು ಮನೆ ರಘುನಾಥರಾಯರ ಮಗಳು ಮಾಲತೀನ ಮೆಲ್ಲಗೆ ಉಪಾಯವಾಗಿ ಮನೆಗೆ ಕರೆದು ಹೆದರಿಸಿ, ಅವಳ ಮೇಲೆ ಅತ್ಯಾಚಾರ ನಡೆಸಿಬಿಟ್ಟ ಸ್ವಾಮಿ ಆ ಷಂಡ!" ಎಂದು ಇಲಿಯನ್ನು ಹುಲಿಯನ್ನಾಗಿ ಮಾಡಿ ಹೇಳಿದೆ.......

ಹೇಳಿದೆ ಏನು? ಇನ್ನೂ ಪೂರ್ತಿ ಹೇಳೇ ಇರಲಿಲ್ಲ! ಅಷ್ಟರೊಳಗೆ, ಮೇಲ್ಗಡೆ ಹಾಸಿಗೆ ಟ್ರಂಕು ಇಡುತ್ತಾರಲ್ಲ, ಅಲ್ಲಿಂದ ಏನೋ ಧೊಪ್ಪನೆ ಬಿದ್ದಹಾಗಾಯಿತು ಅದೂ ನನ್ನ ಎದುರಿಗೇ! ನಾನು ಬೆಚ್ಚಿ, ಬಿಟ್ಟ ಕಣ್ಣು ಬಿಟ್ಟುಕೊಂಡು ನೋಡಿದರೆ, ಒಳ್ಳೆಯ ಯಮಧೂತನ ಹಾಗೆ, ಇನ್ನೂರೈವತ್ತು ಪೌಂಡಿಗೆ ಕಡಿಮೆಯಿಲ್ಲದ ಕೃಷ್ಣ ವರ್ಣದ ಬೊಜ್ಜಾಸಾಮಿಯೊಬ್ಬನು, ನನ್ನನ್ನೇ ತಿಂದುಬಿಡುವಂತೆ ಕಣ್ಣು ಕೆಂಪಗೆ ಮಾಡಿಕೊಂಡು ನಿಂತಿದ್ದ ಸ್ವಾಮಿ! ನನ್ನ ನಾಲಿಗೆ ನನಗೆ ಮಾತನಾಡುವುದಕ್ಕೆ ಅವಕಾಶವೇ ಕೊಡಲಿಲ್ಲ! ಆದರೂ ಬಹಳ ಪ್ರಯಾಸದಿಂದ "ಏ... ಏ.. ಏನು?" ಎಂದೆ!

"........ಮಗನೇ! ನಾನು ಮಾಲತಿ ಮೇಲೆ ಅತ್ಯಾಚಾರ ಮಾಡಿದ್ದು ನಿನಗೆ ಹೇಗೆ ಗೊತ್ತಾಯಿತೋ? ನೀನು ನೋಡಿದೆಯೇನೋ ಬಂದು?...." ಎಂದು ಔಡು ಕಚ್ಚಿ, ತೋಳನ್ನು ಮೇಲಕ್ಕೆ ಮುದುರಿಯೇ ಬಿಟ್ಟ ಸ್ವಾಮಿ,......ಬ......ಬ..... ಬಕಾಸುರ!

ಮುಂದೇನಾಯಿತೋ ಜ್ಞಾಪಕವಿಲ್ಲ ಸ್ವಾಮಿ! ಆದರೂ ಮೈ ಕೈ ಮಾತ್ರ ನೋಯುತ್ತಲೇ ಇದೆ........

—ಬಿ. ವಿ. ಸು.

"ಪ್ರೇಮವಿಲ್ಲ"

'ಪ್ರೇಮವಿಲ್ಲ'ದ ಒಳಗೆ ಈರ್ವರೇ ಕುಳಿತಿಹರು
ಆರವರು? ಆರವರು? ನೋಡಿರಣ್ಣ
ಒಡೆಯ ಒಡತಿಯರಹುದೆ? ದುಸ್ಸಾಧ್ಯ! ದುಸ್ಸಾಧ್ಯ!
ಪ್ರೇಮ ಕಲಹದ ಭರದಿ ಬೀದಿ ಬರಿದು! ೧

"ಎನ್ನ ಪ್ರೇಮದ ಕೂಸೆ, ಎನ್ನ ಬಳ್ಳಿಯ ಕೂಸೆ
ಎಮ್ಮ ಮನೆ ಬೆಳಗಿಸುವ ಚಂದ್ರಮನ ಮರಿಯೆ"
ಎನ್ನುತಿಹರಾರಿಂಗೆ? ಕಂದ ಚಿನ್ನನಿಗಹುದೆ?
ಒಲವನರಿಯದ ಚಿನ್ನ! ಚೆನ್ನುಡಿಗಳು! ೨

ಮುದ್ದಿಕ್ಕುತಿಹ ಶಬ್ದ! ಮುಗಿಯಲೊಲ್ಲದು ಇನ್ನು!
ಸಾಕು ಸಾಕಾಯ್ತಣ್ಣ ಕೇಳಿ ಕೇಳಿ!
ಹೊರಟರದುಗೋ ಹೊರಗೆ ಗಾಳಿ ಸಂಚಾರಕ್ಕೆ
'ಪ್ರೇಮವಿಲ್ಲ'ದ ಒಡತಿ, ಜೂಲಿನಾಯಿ!! ೩

—ಮೋಹನರಾಂ.

ಬಾಲವೇ ನಾಸ್ತಿ

ಸುಗ್ರೀವ, ಆಂಜನೇಯ ಮುಂತಾದ ಕಪಿಗಳೆಲ್ಲರೂ ಶ್ರೀರಾಮನೊಂದಿಗೆ ಸೀತಾಮ್ಮನವರನ್ನು ಬಿಡಿಸಿಕೊಂಡು ಬರುವುದಕ್ಕಾಗಿ ಲಂಕೆಗೆ ಹೊರಟರು. ಸುಗ್ರೀವನ ರಾಣಿವಾಸದವರಿಗೆ ಅವರೆಲ್ಲರೂ ಎಂದು ಹಿಂತಿರುಗಿ ಬರುತ್ತಾರೋ ಎಂಬುದೇ ಚಿಂತೆ. ರಾಮನ ಅನುಗ್ರಹದಿಂದ ಕಪಿಗಳಿಗೆ ಯಾವ ಅಪಾಯವೂ ತಗುಲುವುದಿಲ್ಲವೆಂದು ಅವರಿಗೆ ಗೊತ್ತು. ಅವರಿಗಿದ್ದ ಬಯಕೆ ಬೇರೊಂದು.

ರಾಣಿವಾಸದವರು ಯಾರೂ ಮನುಷ್ಯ ಜಾತಿ ಹೆಂಗಸನ್ನು ನೋಡಿರಲಿಲ್ಲ. ರಾಜಕುಮಾರಿಯರನ್ನು ಅವರು ಕಂಡಿದ್ದೇ ಇಲ್ಲ. ಸೀತಾದೇವಿ, ಮಹಾರಾಜನ ಮಗಳು; ಮಹಾರಾಜನ ಸೊಸೆ. ಅವಳ ಅಂದವನ್ನೂ ಚಂದವನ್ನೂ ಎಲ್ಲರೂ ಕೊಂಡಾಡುತ್ತಿದ್ದರು. ಲಂಕಾಧೀಶ್ವರನು ಅವಳನ್ನು ಅಪಹರಿಸಿದನು; ಶ್ರೀರಾಮಚಂದ್ರನು ಅವಳನ್ನು ಬಿಡಿಸಿತರಲು ದಂಡು, ಧಾಳಿ ಕಟ್ಟಿಕೊಂಡು ಹೋಗುತ್ತಿದ್ದಾನೆ. ಆದ್ದರಿಂದ ರಾಣಿಯವರಿಗೆ ಸೀತಾದೇವಿಯನ್ನು ನೋಡಬೇಕೆಂಬ ಆಸೆ ಉಂಟಾಯಿತು

ರಾಕ್ಷಸರನ್ನು ಕೊಂದು ಸೀತೆಯನ್ನು ಅಯೋಧ್ಯೆಗೆ ಕರೆದುಕೊಂಡು ಹೋಗುವಾಗ ದಾರಿಯಲ್ಲಿ ತಮ್ಮ ಊರಿಗೆ ಬಂದು ಒಂದು ದಿನ ತಂಗಲೇಬೇಕೆಂದು ಅವರು ಬಲವಂತ ಪಡಿಸಿದರು. ರಾಮನೂ ಕೂಡ ಆಗಬಹುದು ಎಂದು ಒಪ್ಪಿದನು.

ಒಂದೆರಡು ತಿಂಗಳಾದ ಕೂಡಲೇ, ರಾಣಿಯರೆಲ್ಲರೂ ಎತ್ತರವಾದ ಒಂದು ಮರವನ್ನು ಹುಡುಕಿದರು ಇದರ ತುತ್ತತುದಿಯಲ್ಲೇ ಕುಳಿತು ದಿನವೂ ಲಂಕೆಯ ಕಡೆ ಆಕಾಶವನ್ನೇ ನೋಡುವರು. ಹನುಮಂತನ ಹೆಗಲ ಮೇಲೆ ಗಂಡ, ಹೆಂಡತಿ, ಮೈದುನ—ಬರುವರು ಎಂದು ಅವರ ನಂಬಿಕೆ. ಆದರೆ, ರಾಮನು ಆ ರೀತಿ ಬರಲಿಲ್ಲ. ಕುಬೇರನ ವಿಮಾನದಲ್ಲಿ ಬಂದಿಳಿದನು. ವಿಮಾನದೊಳಗಿಂದ ರಾಮ, ಲಕ್ಷ್ಮಣ, ಸೀತೆ, ವಿಭೀಷಣ, ಕಪಿವೀರರು ಎಲ್ಲರೂ ಹೊರಕ್ಕೆ ಬಂದರು. ಅವರೆಲ್ಲರೂ ಸುಗ್ರೀವನ ಅರಮನೆಯ ಅಂಗಳದ ಕಡೆಗೆ ನಡೆದರು.

ರಾಣೀವಾಸದವರೆಂದರೆ ಹೆಣ್ಣು ಕಪಿಗಳು. ಅವರು ಸೀತೆಯನ್ನು ಬಿಟ್ಟ ಕಣ್ಣು ಬಿಟ್ಟಹಾಗೆ ಕೊಂಚಹೊತ್ತು ನೋಡಿದರು. ನೋಡಿ, ಕಿಚಿಪಿಚಿ ನಕ್ಕರು. ಅರಮನೆಯೊಳಕ್ಕೆ ಥಂಗನೆ ನೆಗೆದರು. ನೆಲದ ಮೇಲೆ ಬಿದ್ದು ನಕ್ಕರು. "ಇವಳೇನೇ ಸೀತೆ? ಸ್ವಲ್ಪವೂ ಚೆನ್ನಾಗಿಲ್ಲ! ಮುಖ ಮುಂದಕ್ಕೆ ಚಾಚಿರಬೇಡವೇ? ಎಷ್ಟು ಅಗಲ ಅವಳ ಕಣ್ಣು! ಹಣೆಯೋ ತುಂಬಾ ಅಗಲ! ಉದ್ದವಾದ ಜಡೆ ಬೇರೆ! ವಿಪರೀತ ಎತ್ತರ! ಕೈ ಬೇರೆ ಮೋಟು! ಬಾಲವೇ ನಾಸ್ತಿ! ಎಂದು ಒಬ್ಬರಿಗೊಬ್ಬರು ಹೇಳಿಕೊಂಡರು.

—ನಾ. ಕ.

ಪ್ರಶ್ನಾವಳಿ

ಲೀಲಾ ಚಿಟ್ನೀಸ್ ಮೂಗಿನ ಮೇಲೆ ಚಲನ ಚಿತ್ರ ಒಂದರಲ್ಲಿ ದೃಷ್ಟಿ ಬಟ್ಟನ್ನು ಇಟ್ಟರು.

ದಿಟವೇ? ಸುಳ್ಳೇ?

ಶಕುಂತಳಾ ಚಿತ್ರದಲ್ಲಿ ಸುಬ್ಬುಲಕ್ಷ್ಮಿಯು ಗಂಟಲಿಗೆ ಗಂಧ ಹಚ್ಚಿದ್ದಳು.

ದಿಟವೇ? ಸುಳ್ಳೇ?

ಅಶೋಕ ಕುಮಾರನು ಇದ್ದ ಮೀಶೆಯನ್ನು ಬೋಳಿಸಿದ.

ದಿಟವೇ? ಸುಳ್ಳೇ?

ಚಲನ ಚಿತ್ರ ಪತ್ರಿಕೆಯೊಂದರಲ್ಲಿ ಈ ತೆರನಾದ ಮಾನಸಿಕ ವ್ಯಾಯಾಮ ಪ್ರಶ್ನೆಗಳು ಇನ್ನೂ ಹತ್ತು ಪ್ರಶ್ನೆಗಳಿವೆ. ಸರಿಯಾದ ಉತ್ತರ ಬರೆದರೆ, ಉತ್ತರಕ್ಕೆ ಐದರಂತೆ ಎಣಿಸಿಕೊಂಡು ಒಟ್ಟು ೮೦ ಬಂದರೆ, ಚಲನ ಚಿತ್ರ ಜ್ಞಾನವಿದೆಯೆಂದೂ, ೬೦ ಬಂದರೆ ಬಾಧಕವಿಲ್ಲವೆಂದೂ, ೪೦ ಬಂದರೆ ಸಾಲದೆಂದೂ, ೨೦ ಬಂದರೆ ಮಂಕೆಂದೂ ತೀರ್ಮಾನಿಸಿಕೊಳ್ಳಬೇಕಂತೆ. ಸರಿಯಾದ ಉತ್ತರವು ಮುಂದಿನ ತಿಂಗಳ ಮಾಸಪತ್ರಿಕೆಯಲ್ಲಿ ಪ್ರಚುರವಾಗುವುದಂತೆ.

ಹೋದ ಸಲ ನಾನು ಈ ಪ್ರಶ್ನೆಗಳನ್ನು ಯಥಾರ್ಥವಾಗಿ ಉತ್ತರ ಹೇಳ ಹೋದೆ ಈ ಸಲ ಪತ್ರಿಕೆಯನ್ನು ಕೊಳ್ಳುವಾಗಲೇ 'ನಾನೊಂದು ಮಂಕು' ಇದನ್ನು ತಿಳಿದುಕೊಳ್ಳುವುದಕ್ಕೆ ಪತ್ರಿಕೆಯನ್ನೇಕೆ ಓದಬೇಕು. ಕನ್ನಡಿ ನೋಡಿಕೊಂಡರೆ ಸಾಲದೇ, ಅಲ್ಲದೆ ಈ ಪ್ರಶ್ನೆಗಳಿಗೆ ಉತ್ತರ ಕೊಡಹೋದಾಗಲೇ ಮಂಕುತನ ಕಂಡುಬಂದಂತೆ ತಿರುಗಿ ಏನು ನೋಡುವುದು ಎಂದಂದುಕೊಂಡೆ.

ಆದರೂ ಕೊಂಡ ತಪ್ಪಿಗೆ ನೋಡಿದೆ. ಉತ್ತರಗಳ ಮೊತ್ತ ಸಾರಾಂಶ ೧೮. ಅಂದರೆ ಮಂಕುತನ ಎಂಬುದು ಖಂಡಿತವಾಯ್ತು.

ಹಾಗೆಯೇ ಯೋಚಿಸಿದೆ. ಅರೆ? ಸುಬ್ಬುಲಕ್ಷ್ಮಿ ಗಂಟಲಿಗೆ ಗಂಧ ಹಚ್ಚಿಕೊಂಡರೆ ಸಂಗೀತ ಮಧುರವಾಗುತ್ತೆಯೇ? ಅಲ್ಲದಿದ್ದರೆ, ಚಿತ್ರ ನೋಡಿದವರಿಗೆ ಗಂಧ ಹಚ್ಚಿದ್ದು ಹೇಗೆ ಪತ್ತೆಯಾಗಬೇಕು? ಲೀಲಾ ಚಿಟ್ನೀಸ್ ಮೂಗಿನ ಮೇಲೆ ದೃಷ್ಟಿ ಬಟ್ಟಿದ್ದದ್ದು ಏಕೆ? ಮೂಗೇನಾದರೂ ತರಿದು ಹೋಗಿ ಗಾಯದ ಗುರುತು ಹಾಗೆ ಕಾಣಿಸಿತೇ, ಇಲ್ಲವೇ? ರಂಗು ಶಿಲ್ಪಿಯು ಅವಳ ಮುಖಕ್ಕೆ ಬಣ್ಣ ಹಚ್ಚ ಹೋದಾಗ, ತುಟಿಗೆ ಕೆಂಪೇರಿಸಲು ಹೊರಟಾಗ ನಾಚಿಕೆಯಿಂದ ಅವಳು ತಲೆ ತಗ್ಗಿಸಿದಾಗ ಆ ರಂಗು ಮೂಗಿನ ಮೇಲೆ ಬಿದ್ದಿತೇ? ಚಟ್ನೀಸ್ ಕೆಳಗೆ ಬಿದ್ದರೆ ಅದೂ ಒಂದು ವರಸೆ ಎಂದು ಹಾಗೆಯೇ ನಟನೆ ಮಾಡಿಸಿದರೇ?

ಅಶೋಕ ಕುಮಾರನು ಮೀಸೆ ಬಿಟ್ಟಿದ್ದನೇ ? ಚಲನಚಿತ್ರಕ್ಕೆ ಸೇರಿದ ಮೇಲೆ ಮೀಸೆ ಬೋಳಿಸಲು ಕಾರಣವೇನು ? ಅವನ ಪುರುಷತ್ವವು ಮುಕ್ತಾಯವಾಯಿತೆಂದೇ ಅಥವಾ ಈಗಿನ ಕಾಲದಲ್ಲಿ ಗಂಡಸುತನವೆಲ್ಲಿ ಎಂದೇ ? ಹಾಗಲ್ಲದಿದ್ದರೆ, ಹೆಂಡತಿಯ ಬೆದರಿಕೆಗೆ ಹೆದರಿ ಬೋಳಿಸಿದನೆ.

ಈ ಯೋಚನೆಗಳೆಲ್ಲಾ ಹೊಳೆಯ ಹತ್ತಿದುವು. ಆದರೂ ನನ್ನ ಫಲಿತಾಂಶ ೧೮. ಅದು ಬೇರೆ ಕೊರೆಯುತ್ತಿತ್ತು. ಚಲನಚಿತ್ರಗಳ ವಿಷಯ ನನಗೆ ತಿಳಿಯದೇ ಇರಬಹುದು ಆದರೂ ಮಂಕು ಎನಿಸುವಷ್ಟು ಮುಠ್ಠಾಳತನವೇ ?

ಇರಲಿ ಚಲನಚಿತ್ರ ಪರಿಶ್ರಮವಿದ್ದವರಿಗೆ ನಾನು ಕೆಲವು ಪ್ರಶ್ನೆಗಳನ್ನು ಹಾಕುತ್ತೇನೆ. ಸರಿಯಾದ ಉತ್ತರಕ್ಕೆ ೫ ಎಂದು ಲೆಕ್ಕಮಾಡಿ ಒಟ್ಟು ನೂರು ಬಂದರೆ ಮಂಕು ಎಂದು ಓದಿಕೊಳ್ಳಿ ಎಂದು ಟಿಪ್ಪಣಿ ಹಾಕುತ್ತೇನೆ. ಎಲ್ಲರೂ ಆಗ ಕೆಳಗೆ ಬಿದ್ದಂತೆಯೇ—ಉದಾಹರಣೆಯ ಪ್ರಶ್ನೆಗಳನ್ನು ಹಾಕುತ್ತೇನೆ—ಸುಧಾರಿಸಿಕೊಳ್ಳಿ.

೧) ಮಾಸ್ತಿಯವರು ಕುಸ್ತಿಯಲ್ಲಿ ಪ್ರವೀಣರೇ ?

೨) ವಿ. ಸೀ. ಅಂದರೆ ವಿಕ್ಟೋರಿಯಾ ಕ್ರಾಸ್ ಪ್ರಶಸ್ತಿ ಹೊಂದಿದವರೇ ?

೩) ಮುಗುಳಿಯವರು ಮಾತನಾಡಿದರೆ ಉಗುಳು ಬೀಳುತ್ತದೆಯೇ ?

೪) ಸಿದ್ಧವನದವರೆಲ್ಲಾ, ಗೆದ್ದವರೇನೇ ?

೫) ಕನ್ನಡ ಕಸ್ತೂರಿ ಎಂದ ಮೇಲೆ ಕಸ್ತೂರಿ ಅವರು ಕನ್ನಡಿಗರೇ ?

——o——

" ವಿಭೂತಿಪುರದಲ್ಲಿ ಬೆಂಕಿ ಅನಾಹುತ "

!......................................!

* *

ಕಳೆದ ಸಾಲಿನಲ್ಲಿ ಸಂಯುಕ್ತ ಸ್ಥಾನದಲ್ಲಿ ೧೫ ಲಕ್ಷ ಶಿಶುಗಳು ಹೆಚ್ಚು ಜನಿಸಿದವು.

—" ಯುದ್ಧಕಾಲೆ ಸಿಪಾಯಿ ಜನನಃ "

* *

ಅಲ್ಲವೇ ?

ಕಪ್ಪೇ! ಯುಗ ಯುಗಗಳ ಹಿಂದೆ ನಿನಗೊಂದು ಉತ್ಕೃಷ್ಟಕಾಲವಿತ್ತು ಎಂತಲೇ ಕಪ್ಪಿದ್ದ ವ್ಯಕ್ತಿಗಳು, ಅಹುದು, ಅಲ್ಲ ಎರಡನ್ನು ಮಾಡಿದರೂ ಪೂಜ್ಯತೆ ದೊರೆಯಿತು ಅವರ ಕಪ್ಪಿಗೆ ಅಂದು. ಆದರೆ ಕಲಿಯುಗದೊಳಗೆ ನಿನಗೆ ಇಷ್ಟು ಮರ್ಯಾದೆ ಕೂಡಾ ಸಿಗಬೇಡವೇ? ಅಯ್ಯೋ ಕಪ್ಪೇ! ಈ ಯುಗದಲ್ಲಿ ನೀನಿಷ್ಟು ಕನಿಷ್ಟಕ್ಕೆ ಬರಬಹುದೇ?

ವಿಘ್ನಕ್ಕೆಲ್ಲಾ ಅಧಿದೇವನಾದ ವಿಘ್ನೇಶ್ವರನಿಗೆ ಕರಿವದನನೆಂಬ ನಾಮ ಉಂಟು, ಇನ್ನೇನು ಬೇಕು ಸಾಕ್ಷಿಗೆ? ಕಪ್ಪು ಮುಖದ ದೇವನಿಗೆ ಅಗ್ರಪೂಜೆ. ಅಲ್ಲದೆ ತ್ರೇತಾಯುಗದ ರಾಮ, ದ್ವಾಪರಯುಗದ ಕೃಷ್ಣ ಇವರೆಲ್ಲಾ ಕಪ್ಪೇ ಇದ್ದರೆನ್ನುವುದಕ್ಕೆ ನಾಟಕಗಳಲ್ಲಿ ಇಂದಿಗೂ ಕೆಂಪಿದ್ದವನಿಗೆ ಕೂಡಾ ಬಣ್ಣ ಬಳಿದು ನೀಲಮೇಘಶ್ಯಾಮರನ್ನು ಮಾಡುವುದೇ ಸಾಕ್ಷಿಯಾಗಿದೆ ಅಲ್ಲವೇ? ಸೀತೆಯಂತಹ ಸಾಧ್ವಿ ಶ್ಯಾಮ ವರ್ಣದ ರಾಮನಿಗೂ, ಹದಿನಾರು ಸಾವಿರ ಗೋಪಿಕೆಯರು ಕಪ್ಪಾದ ಕೃಷ್ಣನಿಗೂ ಹಿಯ್ಯಾಳಿಸದೆ ದೊರೆತರು ಅಂದು. ಇಂದು ಒಂದನ್ನು ದೊರಕಿಸಿಕೊಳ್ಳಬೇಕಾದರೆ ಎಷ್ಟು ಕಷ್ಟ. ಕಷ್ಟವೆಂದರೇನು ಇಂದು ಕೂಡಾ ಹಿಂದಿನಿಂದ ನನಗೂ ಒಂದು ಹೆಣ್ಣು ದೊರೆಯಬಹುದು ಇಲ್ಲೆನ್ನಲಾರೆ. ಆದರೆ ಒಂದೆರಡು ಕಡೆಯಿಂದ ನನ್ನ ಬಣ್ಣಕ್ಕೆ ಬಹದ್ದೂರಿಕೆಯ ಓಲೆಗಳು ಬಂದಿವೆ. ಅದಕ್ಕಾಗಿಯೇ ಬಣ್ಣವನ್ನು ಹಳಿದ ಹೆಣ್ಣುಗಳಿಗೆ ಬಣ್ಣವಾದರೂ ಯಾವುದರಿಂದ ಎನ್ನುವುದನ್ನು ಒಂದೆರಡು ಒಳಮಾತುಗಳಿಂದ ಹೇಳಲು ಹೊರಟಿದ್ದೇನೆ. ಅಲ್ಲಗಳೆವ ಸಿಟ್ಟಿನಿಂದಲ್ಲ, ಸೂಕ್ಷ್ಮದಿಂದ ಅಷ್ಟೇ.

ಕಪ್ಪು ಕುಂತಲಗಳು ಕಪೋಲಗಳ ಮೇಲೆ ಕುಣಿದಾಡುತ್ತಾ, ಸರ್ಪದಾಕಾರವಾದ ವೇಣಿಯು ಬೆನ್ನ ಮೇಲೆ ಸುಳಿದಾಡುತ್ತಿದ್ದರೇನೇ ನಾಗವೇಣಿಯರಾದಾರೇ ಹೊರತು ಅಜ್ಜಮ್ಮನ ತಲೆ ಬಣ್ಣವಿದ್ದು ಗೋಸಾವಿಯ ಕೆಂಜೆಡೆ ಇದ್ದರೆ ಮುದಿವೇಣಿ ಭಿಕ್ಷವೇಣಿಯರೆಂಬ ಅಪಹಾಸ್ಯದ ವರ್ಣನೆಗೆ ಈಡಾಗುತ್ತಿರಲಿಲ್ಲವೇ ಇವರು? ಹೋಗಲಿ ಮೀನಾಕ್ಷಿ, ಅಂಬುಜಾಕ್ಷಿ, ವಿಶಾಲಾಕ್ಷಿ, ಹರಿಣಾಕ್ಷಿ, ಇಂತಹ 'ಕ್ಷಿ' ಎಂಬ ಬಿರುದುಗಳನ್ನೆಲ್ಲಾ ಪಡೆದ ಸುಕುಮೋರೆಯರಿಗೆಲ್ಲಾ ಕಣ್ಣುಗುಡ್ಡೆಯೊಂದು ಕಪ್ಪಿಲ್ಲದೇ ಹೋದರೆ ಏನೆಂದು ವರ್ಣನೆ ಮಾಡಿಸಿಕೊಳ್ಳುತ್ತಿದ್ದರೋ ಇವರು? ಹಾ! ಅಲ್ಲಾ! ಕಬ್ಬಿಗೆ ಜೇನಿಟ್ಟಂತೆ ಅಥವಾ ಬಂಗಾರಕ್ಕೆ ಬಣ್ಣ ಕೊಟ್ಟಂತೆ, ಈ ಕಾಮಾಕ್ಷಿಯರ ಕಣ್ಣಿಗೆಲ್ಲಾ ಶೋಭೆ ಕೊಡುವ ಕಾಡಿಗೆಯ ಬಣ್ಣವಾದರೂ ಯಾವುದು? ಕಪ್ಪು ಮತ್ತು ಕೆಂಪು ಇವೆರಡರಲ್ಲಿ ಯಾವುದಕ್ಕೆ ಮನ್ನಣೆ ಇದೆ ಎನ್ನುವುದನ್ನು ಅಜ್ಜಿಯರಾಡುತ್ತಿದ್ದ ಅಮೃತದ ನುಡಿಗಳಲ್ಲಿ ಒಂದನ್ನು ಇಲ್ಲಿ ಹೇಳುತ್ತೇನೆ "ಅತ್ತಿಯ ಹಣ್ಣು ಅತಿ ಕೆಂಪು ಆದರು ಒಡೆದು ನೋಡಿದರೆ ಹುಳು ಬಹಳ"

ಎಂದು "ಹಣ್ಣು ನೀರಾಲೆ ಅತಿ ಕಪ್ಪು ಆದರೂ ತಿಂದು ನೋಡಿದರೆ ರುಚಿ ಬಹಳ" ಎಂದು ದೊಡ್ಡ ದೊಡ್ಡ ಹೆಸ್ಮರಗಳ ಸಾಕ್ಷಿಯನ್ನೇ ಕೊಟ್ಟಿದ್ದಾರೆ ಅವರು. ಕಸ್ತೂರಿ ಕಪ್ಪೇ ಇದ್ದರೂ ಆದರ ಪರಿಮಳ ಕಪ್ಪಾಗಬಹುದೇ? ಅದರ ಗುಣ ಕಪ್ಪಾಗ ಬಹುದೇ? ಕಪ್ಪು ಕಸ್ತೂರಿ (ಎಂದರೆ ಬೆಲೆಬಾಳುವ ವಸ್ತು) ಎಂತಲೇ ಹಾಲಿನ ಬಣ್ಣವನ್ನೋಲುವ ಚಂದ್ರನು ಸಹ ತನ್ನ ಶೋಭೆಗಾಗಿಯೇ ಕಪ್ಪನ್ನು ಅಪ್ಪಿ ಕೊಂಡಿರುವುದು. ಇನ್ನೆಷ್ಟಂತ ಉಪಮೆ ಕೊಡುತ್ತಾ ಹೋಗುವುದು, ಉಪಮೆ ಕೊಡುತ್ತಾ ಹೋದಂತೆಲ್ಲಾ ನನ್ನ ತಲೆ ಕಾಯುತ್ತಾ ಹೋಗುತ್ತದೆ. 'ಸೂಕ್ಷ್ಮದಿಂದ' ಎಂದು ಹೇಳಿದ ಮಾತನ್ನು ಮರೆತು ಸಹನ ತಪ್ಪಬಹುದು ಎಂತಲೇ ಸಾಕುಮಾಡಿದ್ದೇನೆ

ಅಲ್ಲಾ! ಕಾಲೇಜು ವಿದ್ಯೆ ಪಾಸಾದ ನಾನು ಸ್ಲೇಟ್ ಮೇಲಿನ ವಿದ್ಯೆ ಕಲಿತು ಕಲಿಯದ ಹುಡುಗಿಯರಿಂದ ಫೇಲ್ ಮಾಡಿಸಿಕೊಳ್ಳುವುದೆಂದರೇನು? ಅಬ್ಬಾ! ಕಪ್ಪು ಇಷ್ಟು ಕೀಳೇ ಎಂಬ ಭಾವನೆಯು ನನ್ನ ತಲೆಯಲ್ಲಿ ಬಂದು ಬಿಟ್ಟರೆ ಬಗೆ ಹರಿಯದ ಆಲೋಚನೆಯನ್ನು ಬೆಳತನಕ ಮಾಡುತ್ತೇನೆ. ಮತ್ತೇನು ಮಾಡಲಿ? ಕಪ್ಪಾದುದು ನನ್ನ ತಪ್ಪೇ ನೀವೇ ಹೇಳಿ. (ವಾಚಕರಾದ ನಿಮ್ಮನ್ನಲ್ಲದೆ ಮತ್ತಾರನ್ನು ಕೇಳುವುದು) ಅದು ನನ್ನ ತಾಯಿ ತಂದೆಯರ ತಪ್ಪಿರಬಹುದು ಅಥವಾ ವಂಶ ಪರಂಪರೆಯ ತಪ್ಪಿರಬಹುದು ಅವರ ಶಿಕ್ಷೆಯನ್ನು ಅನುಭವಿಸುವವನು ನಾನೇ? ಇದು ಯಾವ ನ್ಯಾಯ? ಅಮೇರಿಕದ ನಾಜೂಕು ನೀರೆಯರೇ ನೀಗ್ರೋನನ್ನು ಮೋಹಿಸುತ್ತಾರೆಂದ ಮೇಲೆ ನಮ್ಮ ದೇಶದ ಹೆಣ್ಣುಗಳು ನಿರಾಕರಿಸುವುದೆಂದರೇನು ನಮ್ಮನ್ನು? (ಕಪ್ಪಿದ್ದವರನ್ನು?)

ಕಪ್ಪನ್ನು ಇಷ್ಟು ಕನಿಷ್ಟವಾಗಿ ಕಾಣುವುದರಿಂದಲೋ ಏನೋ ಕರುಣಾಳುವಾದ ದೇವನು ಪ್ರತಿಯೊಬ್ಬ ಪುರುಷನ ಗಲ್ಲಗಡ್ಡಗಳನ್ನು ಕಪ್ಪೇ ಇರುವ ಹಾಗೆ ಕರುಣಿಸಿರಬಹುದು. ಈ ಮಿಕ್ಕಿದ ಹುಡುಗಿಯರ ಸೊಕ್ಕು ಸೂರೆಯಾಗಲಿ ಎಂದು ಅಲ್ಲವೇ?

—ಶ್ರೀಮತಿ ಟಿ. ಎಮ್.

—— o ——

'ನಿಮ್ಮಗಡ್ಡದ ಪಂಚಾಂಗ'ದಿಂದ ನಮ್ಮ ಗಡ್ಡಕ್ಕೇನೂ ಅನುಕೂಲವಿಲ್ಲ
—ಕ್ಷೌರಕ್ಕೆ ಒಳ್ಳೇ ದಿನ ಗೊತ್ತಾದರೆ ಸಾಲದು; ಬ್ಲೇಡು ಸಿಗಬೇಕಲ್ಲ

*　　　*

ಹೋಟಲು ಕಂಡರೆ ಹೊಟ್ಟೆ ಹಸಿವು! ತೊಟ್ಟಿಲು ಕಂಡರೆ, ತೆವಳಿಕೊಂಡು ಬರುತ್ತಾನೆ!

ಗೆದ್ದವರಾರು ?

"ಮದ್ದೂರು ವಡೆ.... ...ಮದ್ದೂರು ವಡೇ"

"........ ...."

"ಕ್ರಿಕೆಟ್ ಚೆಂಡು ..... ಲೋ ..... ಶಾಸ್ತ್ರೀ"

"........................"

"ಸಾಯಂಕಾಲ ಸಿನೀಮಕ್ಕೆ ಹೋಗೋಣ ಬಾರೋ"

"........................"

"ಬಾಯಿ ಬಿಡೋ...... ಬೂದುಗೆರೆ ಟೋಪಿ"

ಹಿಂದಿನ ಬೆಂಚಿನಲ್ಲಿ ಸಾಲಾಗಿ ಸೇರಿದ್ದ ಸೋಮಾರಿ ಸಂಘದ ಸದಸ್ಯರು, ಎಂದಿನಂತೆ ಇವತ್ತೂ ತಮ್ಮ ಮುಂದೆ ಕೂತಿದ್ದ........ಶಾಸ್ತ್ರಿಯನ್ನು ಎಡಬಿಡದೆ ಪೀಡಿಸುತ್ತಿದ್ದರು. ಶಾಸ್ತ್ರಿಯು ಮೊದಲನೆಯ ಬೆಂಚಿನ ಅಂಚಿನಲ್ಲಿ ಕುಳಿತು, ಮೇಷ್ಟ್ರು ಹಾಕಿಸಿದ ಲೆಕ್ಕದ ಮೇಲೆ, ನೆಟ್ಟಗಮನವಿಟ್ಟು, ತಲೆ ತಗ್ಗಿಸಿ, ಬೆನ್ನು ಬಗ್ಗಿಸಿ, ಹಾಳೆಯ ಮೇಲೆ ಸೀಸದ ಕಡ್ಡಿಯನ್ನು ನಾಗಾಲೋಟದಿಂದ ಓಡಿಸುತ್ತಿದ್ದ.

ಸಂಘದ ಸೆಕ್ರೆಟರಿ ಸೋಮಣ್ಣ 'ಮದ್ದೂರು ವಡೆ' ಅಂದಿದ್ದೂ, ಅವನ ಆಪ್ತ ಕಾರ್ಯದರ್ಶಿ ಪುಟ್ಟ ರಾಮುವಿನ, ಪುಟ್ಟ ಧ್ವನಿಯೊಂದು, 'ಪುಟ್ಟಗೌರಮ್ಮನ ಶಿಷ್ಯ' ಎಂದು ಒದರಿದ್ದಾಗಲೀ, ಕಾರ್ಯದರ್ಶಿಯಾಗಿ ಕೆಲವು ಕಾಲ ಕೆಲಸ ಮಾಡಿದ ಕುಪ್ಪಣ್ಣ—ಶಾಸ್ತ್ರಿಯ ಜುಟ್ಟನ್ನು ಕ್ರಿಕೆಟ್ ಚೆಂಡಿಗೆ ಹೋಲಿಸಿದ್ದಾಗಲೀ—ಶಾಸ್ತ್ರಿಗೆ ಕೇಳಿಸಿತೋ ಇಲ್ಲವೋ ಗೊತ್ತಿಲ್ಲ. ಅವನು ಮಾತನಾಡಲೇ ಇಲ್ಲ.

ಸೋಮಣ್ಣ ಅಂದವಾಗಿ ಕ್ರಾಪು ತೀಡಿ ಕಾಲೇಜಿಗೆ ಬರುತ್ತಿದ್ದ. ಕ್ರಾಪಿನ ಅಂದ ಚೆಂದಗಳಿಗೆ ಮನಸೋತ ಇವನಿಗೆ, ಜುಟ್ಟಿರುವವರನ್ನು ಕಂಡರೆ ಕೆಂಡದಂಥ ಕೋಪ. ಕಾಲೇಜಿನಲ್ಲಿ ಸೋಮಣ್ಣನನ್ನು ಕಾಣದವರಿಲ್ಲ—ಅವನು ಮಾಡದ ಕೆಲಸಗಳಿಲ್ಲ. ನನ್ನ ಪಿಳ್ಳ ಜುಟ್ಟನ್ನು ಕತ್ತರಿಯಿಂದ ಕತ್ತರಿಸಿ ಕೈಗೆ ಕೊಟ್ಟ ಧೀರ. ಬಹಳ ಗಟ್ಟಿಗಳೆಂದು ಹೆಸರು ಪಡೆದ ಚಂಚಲಕುಮಾರಿಯನ್ನು ಕ್ಷಣಕಾಲದಲ್ಲಿ ಕಣ್ಣೀರಿಡುವಂತೆ ಮಾಡಿದ ಶೂರ. ಮೇಷ್ಟ್ರುಗಳು ಕೂಡ ಇವನನ್ನು ಕಂಡರೆ ಹೆದರುತ್ತಿದ್ದರು ಅಡ್ಡ ಹೆಸರಿನ ಮಳೆಯನ್ನು ಮೇಷ್ಟ್ರುಗಳ ಮೇಲೆ ಸುರಿಸಿದ ಇಂದ್ರ—ನಮ್ಮ ಸೋಮಣ್ಣ. ಕ್ಲಾಸ್ ರೂಮಿನಲ್ಲಾಗಲೀ—ಬೀದಿಯಲ್ಲಾಗಲೀ—ಸಿನಿಮಾ ಮಂದಿರಗಳಲ್ಲಾಗಲೀ—ಎಲ್ಲಿ ಸಿಕ್ಕಿದರಲ್ಲಿ—ಮೇಷ್ಟ್ರುಗಳನ್ನು "ಪುಟ್ಟ ಗೌರಮ್ಮ, ಬೆಡ್ ಶೀಟ್ (Bed sheet), ಕುಂಬಳಕಾಯಿ, ಕೊಳಾಯಿ, ಭದ್ರಾವತಿ ಚಿನ್ನ, ತಿರುಪತಿ, ಟೆಸ್ಟ್ ಟ್ಯೂಬ್, ಗರುಡ, ಮೇಡಮ್, ಕುಳ್ಳ ..." ಅಂತ ಸಹಸ್ರ ನಾಮವನ್ನು ಸರಾಗವಾಗಿ ಹೊರಡಿಸುತ್ತಿದ್ದ.

ಸೋಮಣ್ಣನಿಗೆ ಯಾವಾಗಲೂ ಶಾಸ್ತ್ರಿಯ ಜುಟ್ಟಿನ ಮೇಲೆ ಕಣ್ಣು. ಕ್ರಾಪು ಬಿಡಿಸಬೇಕೆಂದು ಇವನ ಹಠ, ಜುಟ್ಟು ತೆಗೆಸುವುದಿಲ್ಲವೆಂದು ಅವನ ಮೊಂಡಾಟ. ಇಂದು ಶಾಸ್ತ್ರಿಯು ತಪ್ಪಿಗಿದ್ದುದರಿಂದ ಸೋಮಣ್ಣನ ಮುಖ ಸಪ್ಪೆಯಾಯಿತು. ಅವನಿಗೆ ಅವಮಾನವೂ ಆಯಿತು. ಕಡೆಗೆ ಕೋಪ ಬಂತು.

೧|| ಘಂಟೆಗೆ ಕಾಲೇಜಿನ ಎದುರು—ಸಾಲು ಮರದ ನೆರಳಲ್ಲಿ—ಸಂಘದ ಸಭೆ ಸೇರಿತು. ಶಾಸ್ತ್ರಿಯ ವರ್ತನೆಯನ್ನು ಸೋಮಣ್ಣನು ಖಂಡಿಸುತ್ತಾ, ತನಗಾದ ಅನುಭವಿಸಲಾರದ ಅವಮಾನವನ್ನು ವಿವರಿಸಿ—"ನಾಳೆ ಕಡೇ ಪೀರಿಯಡ್ ಪ್ರೊ|| ರಾಯರ—ಕೆಮಿಸ್ಟ್ರಿ ಕ್ಲಾಸಿನಲ್ಲಿ....ಶಾಸ್ತ್ರಿಯ ಜುಟ್ಟನ್ನು ಕತ್ತರಿಸದೇ ಹೋದರೆ ಹನ್ನೆರಡು ವರ್ಷ ಮುಖ ಕ್ಷೌರ (face shave) ಮಾಡಿಕೊಳ್ಳುವುದಿಲ್ಲ. ಇದೇ ನನ್ನ ಭೀಷ್ಮ ಪ್ರತಿಜ್ಞೆ" ಎಂದು ತನ್ನ ಯುದ್ಧೋದ್ಯಮ ಭಾಷಣವನ್ನು ಕೊನೆಗಾಣಿಸಿದ. ಶಾಸ್ತ್ರಿಯು ಯೋಚಿಸಿ, ಯೋಚಿಸಿ, ದೇವರು ಮಾಡಿದುದಾಗಲಿ, ಎಂದ. ನಮಗೆಲ್ಲಾ, ನಾಳೆ ಏನಾಗುತ್ತೋ ನೋಡಬೇಕೆಂಬ ಕುತೂಹಲ.

ರಾತ್ರಿ ಅವರವರ ಮನೆ ಸೇರಿದೆವು. ನಮಗೆಲ್ಲಾ ರಾತ್ರಿ ನಿದ್ರೆ ಇಲ್ಲ. ಶಾಸ್ತ್ರಿ ನಮ್ಮ ಮನೆಗೆ ಬಂದು, ಮುಂದೇನು ಮಾಡುವುದು ರಾಮು ಎಂದ ಹೇಗಾದರೂ ಮಾಡಿ ನಾಳೆ ಒಂದು ದಿನ ಜುಟ್ಟುಳಿಸಿಕೊಂಡರೆ ಸಾಕು 'ನಮ್ಮ ಅಪ್ಪ, ತಾತ, ಮುತ್ತಾತನ ಮಾನ ಉಳಿಯುತ್ತೆ' ಅಂತ ಅವನ ಹಂಬಲ. ಕಡೆಗೆ ನಾನೊಂದು ಸಲಹೆ ಕೊಟ್ಟೆ, ಅವನು ಒಪ್ಪಿಗೆಯನ್ನಿತ್ತ.

ಮರುದಿನ ಬೆಳಿಗ್ಗೆ ಶಾಲೆಗೆ ಎಲ್ಲರೂ ಬಂದರು. ಸೋಮಣ್ಣ ಹೊಸ ಬ್ಲೇಡು ಕೊಂಡು ತಂದ. "ಇವತ್ತು ಖಂಡಿತ ನಿನ್ನ ಗಂಟು ಕತ್ತರಿಸುತ್ತೇನೊ" ಎಂದು ಜಂಬ ಕೊಚ್ಚಿದ ೩ ಘಂಟೆ ಹೊಡೆದು, ಪ್ರೊ|| ರಾಯರ ಕ್ಲಾಸಿಗೆ ಎಲ್ಲರೂ ಬೈಸಿಕಲ್ ಏರಿ ಬೇರೆ ಕಟ್ಟಡ ಸೇರಿದರು. ಪ್ರೊ|| ರಾಯರು ಬಂದು ಹಾಜರಿ ತೆಗೆದುಕೊಂಡರು. "ಶಾಸ್ತ್ರೀ" ಎಂದಾಗ, ನಿಶ್ಶಬ್ಧ. ಶಾಸ್ತ್ರಿ ಆ ವೇಳೆಗೆ ಸರಿಯಾಗಿ ಚಕ್ಕರ್........ಶಾಸ್ತ್ರಿ ಯೂನಿಯನ್ (union)ಲ್ಲಿ ಹಳೆಯ 'ಕೊರವಂಜಿ'ಯನ್ನು ಓದುತ್ತಾ, ನಗುತ್ತಾ ಕುಳಿತಿದ್ದಾನೆ ಭೂಪತಿ.

ಪೇಟೆ ರಸ್ತೆಯಲ್ಲಿ ನಾಲ್ಕು ವರ್ಷದ ಗಡ್ಡಬಿಟ್ಟು ಓಡಾಡುವ ಹಿಂದೂವನ್ನು ನೋಡಿದರೆ ಈಗಲೂ ನೀವು ಗುರ್ತಿಸಬಹುದು—ಸೋಮಣ್ಣನನ್ನು.

—ಎ. ಎಸ್. ಆರ್.

———o———

ಸೋಡ್ತಿ

ಸೋಡ್ತಿ ಎಂದೊಡನೆ ಕೆಲವರಿಗೆ ಸ್ವಲ್ಪ ಕಸಿವಿಸಿ. ಯುದ್ಧ ಪ್ರಾರಂಭವಾದಂದಿನಿಂದ ಸೋಡ್ತಿಗೇನೂ ಕಡಿಮೆ ಇಲ್ಲ. 'ಅದೃಷ್ಟ ಪರೀಕ್ಷೆಗಾಗಿ, ದೇಶ ರಕ್ಷಣೆಗಾಗಿ ಸೋಡ್ತಿ ಟಿಕೆಟ್ಟು ಕೊಳ್ಳಿರಿ' ಎಂದು ನೋಟೀಸು. ಪಟೇಲ, ಶ್ಯಾನುಭೋಗ, ರಿಜಿಸ್ಟರ್ ಆಫೀಸು, ತಾಲ್ಲೂಕು ಆಫೀಸು ಎಲ್ಲೆಲ್ಲೂ ಸೋಡ್ತಿ ಟಿಕೇಟು ಮಾರಾಟ. ಅದೂ ಒತ್ತಾಯದಿಂದ ಕರು ಹಾಕದ ದನ, ಎಮ್ಮೆ, ಉಳಲಿಕ್ಕೆ ಬಾರದ ಎತ್ತು, ಕೋಣ, ಯಾರಿಗೂ ಎಷ್ಟಕ್ಕೂ ಬೇಡವಾದ ಹಾಳಾದ ಗಡಿಯಾರ ಇವು ಖಾಸಗಿ ಸೋಡ್ತಿ ಮಾಲುಗಳು. ಇತ್ತೀಚೆಗೆ ನಮ್ಮಲ್ಲೊಂದು ಸಾರ್ವಜನಿಕ ಹಿತಾರ್ಥವಾಗಿ ಒಂದು ಸೋಡ್ತಿ ನಡೆದಿತ್ತು. ಅದು ಸ್ಮಶಾನ ಪುನರುಜ್ಜೀವನಕ್ಕೆ ಜಪಾನ್ ಟೈಂಪೀಸ್ ನೂರನಾಲ್ಕು ರೂಪಾಯಿಗೆ ಸೋಡ್ತಿ ಹಾಕಿತ್ತು. ಬೆಲೆ ಏನೋ ಆರು ರೂಪಾಯಿ ಉಳಿಕೆ ಹಣವು ಸ್ಮಶಾನದ ಉದ್ಧಾರಕ್ಕೆ; ಸ್ಮಶಾನ ಅಧಿಕಾರಿಗಳಿಂದ. ಜೂನ್ ತಿಂಗಳಲ್ಲಿ ಅಂದರೆ ಶಾಲಾ ಪ್ರಾರಂಭ ಸಮಯದಲ್ಲಿ ಎಲ್ಲೆಲ್ಲೂ ಕಾಫಿ ಸೋಡ್ತಿ, ಹಳೆ ತರಗತಿಯ ಹಳೆ ಪುಸ್ತಕ ಮಾರಾಟದಿಂದ ಬಂದ ಹಣ ಈ ಸೋಡ್ತಿಗಾಗಿಯೇ ಮುಗಿಯುತ್ತಿತ್ತು. ಆದರೆ ನಮ್ಮ ಸೋಡ್ತಿ ಹೊಸ ರೀತಿದ್ದು. ಎಲ್ಲರೂ ಲಂಚಕ್ಕಾಗಿ ಸೋಡ್ತಿ, ನಾವು ಹಾಗಲ್ಲ. "ಎಲ್ಲ ಬೀಜ ಒಳಗೆ, ಗೇರು ಬೀಜ ಹೊರಗೆ" ಎಂಬಂತೆ.

ನನ್ನ ಹೆಂಡ್ತಿ ಗರ್ಭಿಣಿ. ಒಂದು ದಿನ ಜಗುಲಿಯಲ್ಲಿ ಕುಳಿತು ಮಾತಾಡುತ್ತಿದ್ದೇವೆ. ಹಾಲಕ್ಕಿ ನರಸಣ್ಣ ಬಂದು "ನಿಮ್ಮ ಹೆಂಡ್ತಿ ಗಂಡು ಮಗು ಹೆರುತ್ತಾರೆ. ಮಗು ಸುಲಕ್ಷಣ. ಒಳ್ಳೇ ಕೀರ್ತಿ, ಸಂಪತ್ತು ಸಂಪಾದಿಸುವ ಲಕ್ಷಣ ಇದೆ" ಎಂದ. ಸಂತೋಷವಾಯ್ತು. ಎರಡಾಣೆ ಪಾವಲಿ ಕೊಟ್ಟೆ. "ಒಂದು ಪಟ್ಟೆ ಶಾಲು ಇನಾಮು ಮಾಡಬೇಕು" ಎಂದು ಹಠ ಹಿಡಿದ. ನಾನು ಖಾದಿಯಲ್ಲದೆ ಬೇರೆ ವಸ್ತ್ರ ಉಡುತ್ತಿದ್ದಿಲ್ಲ. ಕಡೆಗೆ ಖಾದಿ ಶಾಲು ಕೊಟ್ಟೆ. ನಮಸ್ಕಾರ ಮಾಡಿ ಹೊರಟು ಹೋದ ಅಂದಿನಿಂದ ಮನಸ್ಸಿನಲ್ಲಿ ಮಗುವಿನ ನಾಮಕರಣದ ವಿಚಾರವಾಗಿ ಗುಣಾಕಾರ ಹಾಕುತ್ತಿದ್ದೆ. ಕಡೆಗೆ ನನ್ನ ಹೆಸರಿಗೆ ಪ್ರಸಾದ ಎಂದು ಸೇರಿಸಿ "ಪುರಂದರ ಪ್ರಸಾದ" ಎಂದು ನಾಮಕರಣ ಮಾಡುವುದು ಎಂಬ ನಿರ್ಧಾರಕ್ಕೆ ಬಂದೆ.

ಇಂದು ನಮ್ಮಲ್ಲಿ ಮಗುವಿಗೆ ನಾಮಕರಣ; ಮಗು ಹೆಣ್ಣು. ಭಾವ ಆಫೀಸಿನಿಂದ ರಜಾ ಪಡಕೊಂಡು ಬಂದಿದ್ದ. ಅತ್ತೆ, ಮಾವ ಎಲ್ಲಾ ಬಂದಿದ್ದಾರೆ. ಅಕ್ಕನಂತೂ ಮನೆಯಲ್ಲೇ ಇದ್ದಾಳೆ. ಜೋಯಿಸರು ಬಂದವರು "ರೇವತಿ ನಕ್ಷತ್ರವಾದ್ದರಿಂದ 'ರೇವತಿ' ಎಂದೇ ಇಡೋಣ. ರುದ್ರಾಭಿಷೇಕ ವಗೈರೆ ಮಾಡಿಸುವಾಗ ನಕ್ಷತ್ರದ ಹೆಸರು ಮರೆತು ಹೋಗುವುದಕ್ಕೂ ಅನುಕೂಲ" ಎಂದರು. ನನ್ನಕ್ಕ

"ನಮ್ಮ ತಾಯಿ ಹೆಸರಿಡೋಣ" ಎಂದಳು. ನನ್ನ ಹೆಂಡ್ತಿ "ನನ್ನ ಅತ್ತೆ ಹೆಸರಿಟ್ಟರೆ ನನಗೆ ಕರೆಯಲಿಕ್ಕಾಗುವುದಿಲ್ಲ. ಅದು ಬೇಡ" ಎಂದಳು. ಭಾವ "ಹೊಸ ರೀತಿ ಹೆಸರಿಡಬೇಕು. "ಅಮೃತಕಲಾ, ಕಲಾರಾಣಿ, ನವಪ್ರತಿಭಾ, ಜೀವನಲತಾ" ಮುಂತಾಗಿ ಸೂಚಿಸಿದ. ಅತ್ತೆ "ದೇವರ ಹೆಸರಾಗಬೇಕು ಲಕ್ಷ್ಮೀ, ಸರಸ್ವತಿ, ಗೌರಿ, ಸೀತಾ ಯಾವುದಾದರೂ ಆಗಬಹುದು" ಎಂದರು. ಮಾವ-ಅತ್ತೆ ಮೇಲಣ ಪ್ರೀತಿ ತೋರಿಸುವ ಸಲುವಾಗಿ "ಮಗುವಿನ ಅಜ್ಜಿ ಹೆಸರಿಡೋಣ" ಅಂದರು. ನನಗೆ ರಾಜಕೀಯದಲ್ಲಿ ಮೆಚ್ಚು. ನಾನಂದೆ "ಸರೋಜಿನಿ, ಕಮಲಾದೇವಿ ಇವರು ರಾಜಕೀಯ ರಂಗದಲ್ಲಿ ಹೆಚ್ಚು ಹೆಸರಾದವರು ಈ ಪೈಕಿ ಯಾವುದೂ ಆಗಬಹುದು". ಹೆಂಡ್ತಿಗೆ ಪುಸ್ತಕ ಓದುವುದರಲ್ಲಿ, ಸಿನಿಮಾ ನೋಡುವುದರಲ್ಲಿ ಪ್ರೀತಿ ಹೆಚ್ಚು. ಅವಳು 'ಲೀಲಾ' ಎಂದಾಗಬಹುದು. ಹೆಸರಾಂತವರಲ್ಲಿ ಲೀಲಾ, ಎಂಬ ಹೆಸರಿನವರೇ ಲೆಕ್ಕಕ್ಕೆ ಹೆಚ್ಚು. ಸಿನೆಮಾದಲ್ಲಿ "ಲೀಲಾ ಚಿಟ್ನೀಸ್, ಲೀಲಾ ದೇಶಾಯಿ, ಸಾಹಿತ್ಯದಲ್ಲಿ ಲೀಲಾ ಬ್ಯಾ ಕಾಮತ್, ಲೀಲಾ ಕಾರಂತ" ಎಂದು ಉಪನ್ಯಾಸವನ್ನೇ ಪ್ರಾರಂಭಿಸಿಬಿಟ್ಟಳು.

ಇದೊಂದು ದೊಡ್ಡ ಸಮಸ್ಯೆಯಾಯಿತು. ಒಬ್ಬರ ಸೂಚನೆ ಅನುಮೋದಿಸಿದರೆ ಉಳಿದವರಿಗೆ ಬೇಸರ. ಎಲ್ಲರ ಸೂಚನೆಯನ್ನಂತೂ ಸ್ವೀಕರಿಸುವುದು ಸಾಧ್ಯವಲ್ಲದ ಕೆಲಸ.

ಕಡೆಗೆ ನಾವೆಲ್ಲರೂ ಒಮ್ಮತದಿಂದ ಒಂದು ತೀರ್ಮಾನಕ್ಕೆ ಬಂದೆವು. ಮೇಲೆ ಸೂಚಿಸಿದ ಎಲ್ಲಾ ಹೆಸರುಗಳ ಒಂದೊಂದು ಚೀಟಿ ಬರೆದೆವು. ಬರಹ ಬಾರದ ಮಕ್ಕಳಿಂದ ಚೀಟಿ ತೆಗೆಸುವುದು ಯಾವ ಚೀಟಿ ಮೊದಲು ಬಂತೋ ಅದೇ ಖಾಯಂ ಹೆಸರು.

ಚೀಟಿ ಬರೆದಾಯ್ತು. ಮಗುವೊಂದು ನೋಡಿ ತೆಗೆದುಕೊಟ್ಟಿತು. ನಾನು ಚೀಟಿ ಓದಿದೆ.

"ಜೀವನಲತಾ"

—ಪು. ಪುರಂಧರ.

———o———

* *

ಮನೆ ತುಂಬಾ ನಂಟರು

ರಾಜಿ-ರಾಜಿಯ ಗಂಡ

ನನ್ನ ತಾಯಿ ಹೆತ್ತ ಮಕ್ಕಳಲ್ಲಿ ನಾನೊಬ್ಬನೇ ಗಂಡು! ಆದ್ದರಿಂದ ನನ್ನ ಮದುವೆಗೆ ನಮ್ಮ ನೆಂಟರೆಲ್ಲರೂ ಬಂದೇ ತೀರಬೇಕೆಂದು ಅವಳು ಹಟ ಹಿಡಿದಳು. ಅದರ ಮೇಲೆ ಅಪೀಲೇನಿದೆ? "ಇಪ್ಪತ್ತು ಗಂಡು ಮಕ್ಕಳಿಗೆ ಮದುವೆ ಮಾಡಿಸುತ್ತೀರೇನು ನೀವು....ಸುಮ್ಮನಿರಿ ಅಂದ್ರೆ ....ಕಂಡಿದೇನೆ" ಅಂತ ಅಮ್ಮ ಅಪ್ಪನನ್ನ ಗದರಿಸಿದಳು. ಅವರೂ ಕೂಡ ನಗುನಗುತ್ತಾ "ಇಪ್ಪತ್ತು ಗಂಡು ಹೆರಬೇಡ ಅಂತ ಯಾರು ಹೇಳಿದರು ನಿನಗೆ?" ಅಂದರು ಹೀಗೆ ಆಗಾಗ್ಗೆ ಅವರು ಚೆಲ್ಲಾಟ ಆಡುವುದುಂಟು. ಮೊನ್ನೆ ತಾನೆ ಮದುವೆಯಾದವರ ಹಾಗೆ ಸರಸವಾಗಿ ಮಾತನಾಡುತ್ತಾರೆ,—ಅಮ್ಮನ ಹತ್ತಿರ. ಅವರ ಮಾತಿನಲ್ಲಿ ಅಡಕವಾದ ಹಾಸ್ಯಕ್ಕೆ ಹಿಗ್ಗುತ್ತಾ ಅಮ್ಮ ಕೂಡ, "ಥೂ! ಇನ್ನೂ ನೀವು ಈ ತಮಾಷೆ ಬಿಟ್ಟಿಲ್ಲವಲ್ಲಾ! ನಾಚಿಕೆಗೇಡು, ಅಂದ್ರೆ ....ನಾರಾಯಣ! ಈ ವಯಸ್ಸಿನಲ್ಲೂ ಕೂಡ" ಅಂದರು. ವಯಸ್ಸಿಗೂ ಚೆಲ್ಲಾಟಕ್ಕೂ ಸಂಬಂಧವುಂಟೆ? ಜಾಕ್ಕೆರಿಟ್ಟೈರು ಅಂದ ಹಾಗೆ, ಅದರಾಚೆಗೆ ಸಲ್ಲಾಪ ಕೂಡದೇನು?

"ಅಲ್ಲ ಕಾಣೆ! ಈ ಭೂಪತಿಗಳನ್ನೆಲ್ಲಾ ಕರೆಸಿ ಅಲ್ಲಿಗೆ ಎಳೆದುಕೊಂಡು ಹೋಗಿ ಹಿಂದಕ್ಕೆ ಸಾಗಿಸಿ ಪುನಃ ಸ್ವಸ್ಥಾನಕ್ಕೆ ಕಳುಹಿಸಬೇಕಾದರೆ, ಖರ್ಚೆಷ್ಟು ಅಂತ ಅಂದಾಜು ಗಿಂದಾಜು ಹಾಕಿದಿಯಾ?"

"ಅಂದಾಜು ಯಾಕೆ? ಹಣ ಕೊಟ್ಟಿರುವವರು ಅವರು. ಖರ್ಚು ಮಾಡುವುದಕ್ಕೇನಂತೆ?"

"ಕೊಟ್ಟಿದ್ದನ್ನೆಲ್ಲಾ ಕರಗಿಸಿಬಿಡಬೇಕೇನು?"

"ಬೇಡಿ, ಉಳಿಸಿ. ಉಳಿಸಿ ಎರಡು ಬಂಗಲಿ ಕಟ್ಟಿ, ಬೇಡ ಅಂತೇನೆಯೇ ನಾನು! ಮೊದಲಿನಿಂದಲೂ ಹಣದ ವಿಷಯದಲ್ಲಿ ಇಷ್ಟು ಬುದ್ಧಿ ಉಪಯೋಗಿಸಿದ್ದರೆ, ಈ ಗತಿ ಆಗುತ್ತಿತ್ತೆ? ಶ್ರೀಕಂಠಯ್ಯನಿಗೆ ಸಾಲ ಕೊಡಬೇಡಿ ಅಂತ ಬೊಡಕೊಂಡೆ, ಕೈ ಹಿಡಿದು ಪ್ರಮಾಣ ಮಾಡಿಸಿದೆ. ಕೊಟ್ಟೇ ಕೊಟ್ಟಿರಿ, ೩೦೦ ರೂಪಾಯಿ. ಪಾಪರ್ ಚೀಟಿ ತೆಗೆದುಕೊಂಡ....ಬಿತ್ತು ಬಾಯಿಗೆ ಮಣ್ಣು!"

ತಂದೆಗೆ ರೇಗಿತು. ಶ್ರೀಕಂಠಯ್ಯನ ವಿಷಯ ಎತ್ತಿತು ಅಂದರೆ, ಅವರು ಸಾಕ್ಷಾತ್ ಉಗ್ರ ನರಸಿಂಹ! ಕಂಬ ಸೀಳಿಕೊಂಡು ಬಂದುಬಿಡುವರು.

"ಏನು? ಬಾಯಿಗೆ ಮಣ್ಣು ಬಿತ್ತೆ? ಹೇಗೆ ಬೀಳಿಸುತ್ತಾನೆ ನೋಡೋಣ! ಪಾಪರ್ ಚೀಟಿ ಅಲ್ಲ, ಅವನು ಪ್ರಾಣವೆ ಬಿಡಲಿ, ಪುದುಚ್ಚೇರಿಗೆ ಹೋಗಲಿ, ಗೋವಾಗೆ ಹೋಗಲಿ, ಭೂಪ್ರದಕ್ಷಿಣೆ ಮಾಡಲಿ, ಬಿಟ್ಟೇನೇ ನಾನು? ಬಿಡುಕಾಸು ಬಿಡದೆ ಬಡ್ಡಿ ಸಹಿತ ಅವನ ಮೂಗು ಹಿಂಡಿ ಕಕ್ಕಿಸುತ್ತೇನೆ....... ಕೊಡದೆ ಇದ್ದರೆ ನಾನು....ನಾನು...." ಅಂತ ಎದೆ ಮೇಲೆ ಬಲವಾಗಿ ಗುದ್ದಿ

ಕೊಂಡರು ...ಎದೆ ಒಳಗಿರುವ ತಾನು ಸಾಮಾನ್ಯ ತಾನಲ್ಲ ಎಂದು ಸೂಚಿಸುವುದಕ್ಕಾಗಿ. ಅಂತು, ಶ್ರೀಕಂಠಯ್ಯನ ಪ್ರಸ್ತಾಪದಿಂದ ತಂದೆ ಹದಗೆಟ್ಟರು. "ಇರಲಿ ಬಿಡು! ಆ ಹಣದ ವಿಷಯ ನಾನು ನೋಡಿಕೊಳ್ಳುತ್ತೇನೆ ....ಈಗ, ಏನು ಮಾಡಬೇಕು ಅಂತೀಯಾ?"

"ನಾನೇ? ನಾನೇನಂತೀನಿ? ನಮ್ಮ ಹುಡುಗನ ಮದುವೆಗೆ ನಮ್ಮ ನೆಂಟರೆಲ್ಲ ಬರಬೇಕು ಅಂತೀನಿ" ಎಂದು ಹೇಳುತ್ತಾ ಅಮ್ಮ ರೇಗಿಕೊಂಡು ಅಡಿಗೆ ಮನೆ ಕಡೆ ನಡೆದಳು.

"ಸರಿ" ಎಂದು ಒದರುತ್ತಾ ತಂದೆಯವರೂ ಎದ್ದರು. "ತಪ್ಪಿಸಿಕೊಂಡು ಬಿಡುತ್ತೇನೆ ಅಂತ ತಿಳಿದಿದಾನೆ ಶ್ರೀಕಂಠಯ್ಯ! ಅವನಿಗಿಂತ ನನಗೆ ಬುದ್ಧಿ ಇದೆ ...ಹುಂ... ನನಗೆ ಮೋಸ ಮಾಡಿ ಬದುಕಬಹುದು ಅಂತ ತಿಳಿದಿದಾನೆ ಮುಟ್ಠಾಳ!" ಎಂದು ಪಿಸುಗುಟ್ಟಿದರು. ದುಡ್ಡಿನ ಸಮಾಚಾರದಲ್ಲಿ ನಮ್ಮ ತಂದೆಯದು ತುಂಬಾ ಹಿಡಿತ. ಆದರೆ, ಒಂದು ಕುಂಬಳಕಾಯಿ ಉರುಳಿಹೋಗುತ್ತಿದ್ದರೂ ಸುಮ್ಮನಿರುತ್ತಾರೆ; ಸಾಸುವೆ ಕಾಳನ್ನ ಎಣಿಸಿ ಎಣಿಸಿ ನೋಡುತ್ತಾರೆ!

ಆಹ್ವಾನ ಪತ್ರಿಕೆ ಹೋಗುವುದೇ ತಡ, ನೆಂಟರೆಲ್ಲರೂ ಹೊರಡಲು ಸಿದ್ಧರಾದರು. ಹೊರಟು ಬಂದೇ ಬಿಟ್ಟರು. ಪ್ರತಿಯೊಂದು ರೈಲಿಂದಲೂ ಅವರು ಸಾಲು ಸಾಲಾಗಿ ಇಳಿದರು. ಎರಡು ಮೂರು ಜಟ್ಕಾ ಸಾಲು ಸಾಲಾಗಿ ಇಳಿದರು. ಎರಡು ಮೂರು ಜಟ್ಕಾ ತುಂಬ ನಂಟರು ದಿನವೂ ಬಂದು ತುಂಬಿದರು.

ಮಂಗಳವಾರ ಬೆಳಗಿನ ಗಾಡಿಗೆ ನನ್ನ ಚಿಕ್ಕಮ್ಮ ಗಂಡ ಸಹಿತವಾಗಿ ಬಂದರು. ಬೇರೊಂದು ಗಾಡಿಯಲ್ಲಿ ಅವರ ಮಗಳು ರಾಜಿ, ಆಕೆಯ ಗಂಡ, ಇಬ್ಬರೂ ಆಗ ಮಿಸಿದರು. ರಾಜಿ ಅವರದೆ ನನಗೆ ತುಂಬಾ ಅಚ್ಚುಮೆಚ್ಚು. ನಾನು ಅಂದರೆ ಅವಳಿಗೂ ಅಷ್ಟೆ. ಮುಂದೆ ನನ್ನ ಮದುವೆಯ ದಿನಗಳಲ್ಲಿ ಮದುವಣಿಗ ಹೇಗೆ ಹೇಗೆ ನಡೆದುಕೊಳ್ಳಬೇಕು ಎಂಬುದನ್ನೆಲ್ಲ ನನಗೆ ರಾಜಿಯೇ ಹೇಳಿಕೊಟ್ಟಳು —ಈಗಲೇ ಒಪ್ಪಿಕೊಂಡುಬಿಡುತ್ತೇನೆ.

ಮದುವೆಯಲ್ಲಿ ಗಂಡು ಹೆಣ್ಣು ಇಬ್ಬರೂ ಹೆಂಗಸರ ಕೈಗೊಂಬೆಗಳು. ಅವರ ನಿಲುವು ನಡತೆ ನುಡಿತ ಎಲ್ಲವನ್ನೂ ಆಗ ಹೆಂಗಸರು ಹೀನಾಮಾನವಾಗಿ ಟೀಕಿಸುತ್ತಾರೆ. ಆದರೆ, ರಾಜಿ ಇದ್ದದ್ದರಿಂದ ನನಗೆ ಅವಮಾನ ಎಷ್ಟೋ ಕಡಿಮೆ ಆಯಿತು. ಹೆಣ್ಣಿನ ಕಡೆ ಹುಡುಗಿಯರೆಲ್ಲರೂ ನನ್ನನ್ನು ಬಳಸಿಕೊಂಡು, "ಹೆಂಡತಿ ಹೆಸರು ಹೇಳಬೇಕು" ಅಂತ ಪೀಡಿಸಿದಾಗ, ರಾಜಿ ಅಲ್ಲಿಗೆ ಬಂದು, "ಹೇಳಬೇಡ ಕಣೋ! ಅವಳೇ ಹೇಳಲಿ ನಿನ್ನ ಹೆಸರನ್ನ ಮೊದಲು!" ಅಂತ ನನ್ನ ಪಕ್ಷ ವಹಿಸಿದಳು.

ರಾಜಿಗೆ ೨೧ ವರ್ಷ! ಸೂಟಿ ಅಂದರೆ ಸೂಟಿ! ಪಾದರಸ! ಮೂರು ಹೊತ್ತೂ ನಗು, ಲೇವಡಿ, ತಮಾಷೆ, ಉತ್ಸಾಹ ಲವಲವಿಕೆ, ಓಡಾಟ! ಎಂತಹ ನರಕಯಾತನೆಯಲ್ಲೂ ಅವಳು ಮಾತನಾಡಿಸಿದರೆ ಮಹಾರಾಯ ನಕ್ಕುಬಿಡುತ್ತಾನೆ. ಎಂತಹ ಹುಳಿ ಮೋರೆಯೂ ಕೂಡ ಗೆಲುವಾಗುತ್ತದೆ. ಅವಳು ಎಲ್ಲರನ್ನೂ ಅಣಕಿಸುತ್ತಾಳೆ; ನೂರೆಂಟು ಕೀಟಲೆಗಳನ್ನು ಮಾಡುತ್ತಾಳೆ. ಆದರೆ, ಒಂದು ಅಸಭ್ಯವಿಲ್ಲ; ಒಂದು ಆಭಾಸವಿಲ್ಲ.... ಇಷ್ಟಕ್ಕೂ ಅವಳ ಗಂಡ, ಹಾಳಾದವನು

ಅವಳ ಹತ್ತಿರ ಅಷ್ಟಷ್ಟೇ ಅಂತೆ! ಆದರೂ ಪಾಪ, ರಾಜಿ ಇಷ್ಟು ಖುಷಿಯಾಗಿರುವುದು ಆಶ್ಚರ್ಯ!

ಅವನೊಬ್ಬ ಸ್ಕೂಲ್ ಮೇಷ್ಟ್ರು. ಡ್ರಿಲ್ಲೂ ಹೇಳಿಕೊಡಬೇಕು; ಡ್ರಾಯಿಂಗೂ ಬರೆಸಬೇಕು. ಯಾವುದೋ ಮಿರ್ಷ ಸ್ಕೂಲು. ತಿಂಗಳಿಗೆ ಮೂವತ್ತೇಳು ರೂಪಾಯಿ ಸಂಬಳ. ಸದಾ ಹುಡುಗರ ಕಾಟ ಹೈಕಳನ್ನೆಲ್ಲಾ ಸಾಲಾಗಿ ನಿಲ್ಲಿಸಿ ೩೦ ಗಜದಾಚೆಯಿಂದ ಮಹಾ ದಂಡನಾಯಕನ ಹಾಗೆ, ಅಟ್ಟೆ—ರ್ಷ ಅಂತ ಗರ್ಜಿಸುತ್ತಾನೆ. ಆಗ ಎಲ್ಲರೂ ಥಟಕ್ಕನೆ ಹುಷಾರಾಗಿ ನಿಲ್ಲುವರು. ಒಬ್ಬ ಮಾತ್ರ (ಕೀಟಲೆಗಾಗಿ) ಕಹಿ ಎಣ್ಣೆ ಕುಡಿದ ಕಪಿ ಹಾಗೆ ಕುಸಿದುಕೊಂಡು ನಿಂತಿರುತ್ತಾನೆ! ಸರಿ! ಮುಷ್ಟಿಯನ್ನು ಬಿಗಿದುಕೊಂಡು ರಾಜಿ ಗಂಡ ಅವನ ಕಡೆ ಓಡೋದು, ಹತ್ತಿರ ಹೋಗುತ್ತಲೂ ಅವನು ನೆಟ್ಟಗೆ ನಿಲ್ಲುತ್ತಾನೆ; ಅವನಿಂದ ಹದಿನಾರನೆಯ ಹುಡುಗ ಜೋಲುಬಿದ್ದು ಮಂಡಿ ಮಡಿಸುವುದು, ಅವನನ್ನ ಸರಿಪಡಿಸಿದರೆ ಅತ್ತಕಡೆ ತುದಿಯಲ್ಲಿ ಮತ್ತೊಬ್ಬ ಮುದುರಿಕೊಳ್ಳುವುದು, ಹೀಗೆ ಅವರನ್ನ ಸಾಲಾಗಿ ಸತಾಯಿಸುವುದು,— ಇದು ಪದ್ಧತಿ! ಕಡೆಗೆ, ಅವರು ಸ್ವಸ್ಥಾನಕ್ಕೆ ಬಂದು ನಿಂತು—"ಕೇಳಿ ಎಲ್ಲರೂ! ಅಟ್ಟೆ-ರ್ಷ ಅಂದಾಗ ಹಿಮ್ಮಡಿ ಎರಡೂ ಒಟ್ಟಾಗಿ ಸೇರತಕ್ಕದ್ದು. ಹೆಬ್ಬೆಟ್ಟುಗಳು ೪೫ ಡಿಗ್ರಿಯ ಕೋಣದಲ್ಲಿ ನಿಂತುಕೊಳ್ಳತಕ್ಕದ್ದು. ಕಾಲುಗಳೆರಡೂ ಕೊಂಚವೂ ಸಡಿಲವಾಗಿರಬಾರದು! ಎದೆ ಮುಂದಕ್ಕೆ ಚಾಚಿರಬೇಕು. ಕತ್ತು ನೆಟ್ಟಗೆ ನಿಲ್ಲಬೇಕು. ಕಣ್ಣುಗಳೆರಡೂ ಮುಂದಕ್ಕೆ ೩೦೦ ಅಡಿ ಆಚಿನ ಒಂದು ವಸ್ತುವನ್ನು ನೋಡುತ್ತಿರಬೇಕು". ಸ್ಟ್ಯಾಂಡ್ ಅಟ್ ಈಸ್ ಅಂದಾಗ, ಎಡಗಾಲನ್ನು ಎಡಗಡೆಗೆ ೧೨ ಅಂಗುಲದಷ್ಟು ಒತ್ತರಿಸಿ ಕೈಗಳೆರಡನ್ನೂ ಬೆನ್ನ ಹಿಂದೆ ಬಿಗಿದು ಹಿಡಿಯಬೇಕು. ಯಾವ ಕಾಲಿನ ಮೇಲಾದರೂ ಭಾರ ಹಾಕಿ ಹೇಗೆ ಬೇಕಾದರೂ ನಿಂತುಕೊಳ್ಳಬಹುದು.... ಈಗ....ಅಟ್ಟೆ —ರ್ಷ" ಅಯ್ಯೋ! ಯಥಾಪ್ರಕಾರ ......ಹೈಕಳ ಕೀಟಲೆ. ....ಡ್ರಾಯಿಂಗ್ ಕ್ಲಾಸಿನಲ್ಲೂ ಕೂಡ ಇನ್ನೊಂದು ತೆರನ ಚಿತ್ರಹಿಂಸೆ! ಇದರ ಸೇಡನ್ನೆಲ್ಲಾ ಡ್ರಿಲ್ ಮೇಷ್ಟರು ಮನೆಯಲ್ಲಿ ತೀರಿಸುತ್ತಿದ್ದರು. ಕೆಲವು ದಿನ ಅತೀ ಚೆಲ್ಲು! ಕೆಲವು ದಿನ ತೀರ ಸಿಡುಕು! ರಾಜಿ ಜಾಣೆ! ಆತ ರೇಗಿದರೆ ಬೇಕಾದಷ್ಟು ರೇಗಲಿ ಅಂತ ಸುಮ್ಮನಿದ್ದು ಬಿಡುವಳು ಚೆಲ್ಲಾಟಕ್ಕೆ ಪ್ರಾರಂಭಿಸಿದರೆ, ಹಾಸ್ಯಮಾಡುವಳು.

ರಾಜಿಯನ್ನು ಕಂಡಾಗ ಅವಳ ತಾಯಿ "ಏನೆ? ಹೇಗಿದಾನೆ ಈಗ?" ಅಂದರು. "ಅಯ್ಯೋ! ಅದರ ಸಮಾಚಾರ ಬಿಡಮ್ಮ! ಬಾಯಿಗೆ ಬಂದ ಹಾಗೆ ಬೊಗಳುತ್ತೆ ಒಂದೊಂದು ದಿನ! ಒಂದೊಂದು ದಿನ ಗಲ್ಲ ಹಿಡಿದುಕೊಂಡು ಮುದ್ದು ಮುದ್ದಾಗಿ ಓಡಾಡುತ್ತೆ....... ಗಂಡಸರ ಹಣೇಬರಹವೇ ಅಷ್ಟು, ಅಲ್ಲವೇನಮ್ಮ" ಅಂದಳು ರಾಜಿ!

ಹಾಗೆಯೇನು? ನಿಜವಾಗಿಯೂ?

ಒಂದು ಸಾರಿ ನಾನು ರಾಜಿ ಮನೆಗೆ ಹೋಗಿದ್ದಾಗ ಡ್ರಿಲ್ ಮೇಷ್ಟರಿಗೆ ಆವೇಶ ಬಂದು ಬಿಟ್ಟಿತ್ತು. ರಾಜಿ ಕೊಂಚವೂ ಹೆದರಲಿಲ್ಲ. ಆತನ ಹತ್ತಿರಕ್ಕೆ ಹೋಗಿ, ಆತನ ಕೈಹಿಡಿದು, ಆತನ ಮುಖವನ್ನೇ ನೋಡುತ್ತಾ, "ಏನು, ಸ್ವಾಮಿ! ದೊಡ್ಡ ಮನುಷ್ಯರೇ! ಎಷ್ಟೊಂದು ಉಪ್ಪಿಟ್ಟು

ತಿಂದಿರಿ? ಅಳತೆ ಸೇರು ಒಂದೂವರೆ ಸೇರು ಉಪ್ಪಿಟ್ಟು, ಮೂರು ಕಪ್ಪು ಕಾಫಿ, ಹೊಟ್ಟೆಗೆ ಭರ್ತಿಮಾಡಿಕೊಂಡು ರೇಗಾಡುತ್ತೀರಲ್ಲಾ, ತಿಂದ ತಿಂಡಿಗೆ ಅವಮಾನ! ಬೀದಿಯಲ್ಲಿ ಹೋಗುವವರು ಏನು ತಿಳಿದುಕೊಂಡಾರು? ಕಾಫಿ ಕುಡಿದಿದೀರಿ ಅಂತ ತಿಳಿದುಕೊಂಡಾರೇನು?...." ಎಂದು ಹೇಳಿ ನಕ್ಕಳು! ಗಂಡ ಅಂತ ರೇಗುತ್ತಿದ್ದ ಪೆದ್ದ ನಕ್ಕುನಕ್ಕು ಸುಸ್ತಾಗಿ ರಾಜಿಯ ಕೆನ್ನೆಗೆ ಮೆತ್ತಗೆ ಒಂದು ಏಟು ಬಿಟ್ಟ.

ಭಂಡ ಗಂಡಂದಿರಿರುವ ಮಹಿಳೆಯರು ಇಂತಹ ಸಂದರ್ಭಗಳಲ್ಲಿ ವಿವಾಹ ಬಂಧನದಿಂದ ರಾಜಿಯಾಗಲು ಪ್ರಯತ್ನಿಸುವುದಕ್ಕಿಂತ, ರಾಜಿಯ ತಂತ್ರವನ್ನನುಸರಿಸಿದರೆ ಒಳ್ಳೆಯದೆಂದು ನನಗೆ ತೋರುತ್ತದೆ.

(ಮುಂದಿನ ತಿಂಗಳು—"ಇತರ ನಂಟರು")

—ಎಸ್. ವೀ. ವೀ. ಕೃತಂ.

ಹೊಸ ಅಳಿಯನಿಗೆ ಹೆಂಡತಿ ಚಹ ಕೊಟ್ಟದ್ದು

(ಡಿ. ವಿ. ಗುಂಡಪ್ಪನವರ ಶಿವನಸಮುದ್ರದಿಂದ ಸ್ಫೂರ್ತಿಗೊಂಡ ಮೇಲೆ ಬರೆದದ್ದು)

ಅಲ್ಲಿ ಬಳುಕುತಿಲ್ಲಿ ಬಾಗಿ, ಅಲ್ಲಿ ಬಳಸುತಿಲ್ಲಿ ಸಾಗಿ,
ಜರಿಯಸೀರೆ, ಬಳುಕೆ ಡಾಬು, ಮೃದುಲರವದಿ, ಮುಂದೆ ಸಾರಿ,
ದಣಿವ ಕಳೆಯೆ ಚಹವ ತಂದು, ಅಮೃತಲಹರಿಯಂತೆ ತೋರೆ,
ಪತಿಯು ಇರವನರಿತು ಬಾಲೆ, ಸೆರಗ ಸೆಳೆದು ನಾಚಿ ಬೆವರಿ,
ಮಾವನ ಮನೆಯೆನಿತು ಕುತುಕಮೆನುತ ಪತಿಗೆ ತೋರುತಂ
ಮಾವನ ಮಗಳೆನಿತು ಚತುರಳೆನುತ ಕಣ್ಗೆ ಸಾರುತಂ
ಬಗ್ಗಿ, ಬಸಿಯ ತೆಗೆಯುತಂ, ಹಿಡಿದು ಕಪ್ಪನೋಡುತಂ,
ಬಾಗಿಲಲಿ ಬಾಗುತಂ, ನಿಲದೆ ನಾಟ್ಯವಾಡುತಂ,
ತನಗೆ ತಾನೆ ಹಾಡುತಂ ಗಂಡನನ್ನು ಕಾಡುತಂ,
ದೂರ ದೂರ ಸಾಗುತಂ,
ಬಿಂಕದಿಂದ ಬೀಗುತಂ, ಮೂಕಳಂತೆ ಕೂರುತಂ,
ಛಲದ ಭರದಿ ಆವಿತು ರೇಗಿ, ಕಾಳಿಯಂತೆ ಕನಲಿ, ಮೊರೆದು,
ಅತ್ತಲತ್ತೆ ಮುನಿದು ಕೂಗೆ, ಇತ್ತಲಿತ್ತ, ಸರಿದು ಬರುತ,
ಮತ್ತೆ, ಗಂಡನೆದುರು ಸುಳಿದು, ನಡುಗಿ, ನಾಚಿ, ಹಾಡುತಂ,
ದಣಿವ ಕಳೆಯೆ, ಮತ್ತೆ ಅತ್ತೆ, ಚಹವ ತರಿಸಿ, ತೋರುತಂ
ಬಗ್ಗಿ, ಬಸಿಯ ತೆಗೆಯುತಂ ಹಿಡಿದು ಕಪ್ಪನೋಡುತಂ.

(ಇಲ್ಲಿಗೆ ಈ ಸರಸ ಸಲ್ಲಾಪ ಮುಗಿಯಿತು)

ಗೀತಾಸ್ನಾನಂ

"ಹಟ್‌ಗಯಿ ಲೋ ಖಾಲಿ ಫಟಾ"........"ನಾಚ್ಹೋ ನಾಚ್ಹೋ ಪ್ಯಾರೇ" ...."ಏ ಕೈಸಾ ಅನ್ಯಾಯ ಹಾತಾ"........"ಹಹ್ಹಾ....ಹಹ್ಹಾ"........ಬಹಾರ್ ....ಅಬ್ ಆಯೀ .....'' "ತೂ ಕ್ಯಾ...ಹೇಖ್ ನ ವಾಯಾ........" "ಹರಿ ಕೊಟ್ಟ ಕಾಲಕ್ಕೆ........" ತರ ನ ನ ನಾ........" "ಮಿಲ್‌ಗಯಿ ....ಈ....ಈ... "ತೋಂ ...ನೊಂ...." ಮುಸುಕಿದೀ ವುಬ್ಬಿನಲಿ........"

ನಮ್ಮ ಹಾಸ್ಟಲು ಬಚ್ಚಲು ಮನೆಯ ಶಬ್ಧ ವಿಚಿತ್ರ ನಾನು ಈಗ ನಿಮ್ಮ ಕಿವಿ ಮುಂದೆ ಹಿಡಿದಿದ್ದು. ಮುಂಜಾನೆ ಆರು ಘಂಟೆಗೆ ಪ್ರಾರಂಭವಾಗಿ—ಒಂಬತ್ತು ಗಂಟೆಯವರೆಗೂ ಲೀಲಾಜಾಲವಾಗಿ ಸಂಗೀತ ಸಮಾರಾಧನೆ ದಿನಂ ಪ್ರತಿ ನಡೆಯುತ್ತದೆ. ಅದೊಂದು ವಿಚಿತ್ರ ಸಮಾರಾಧನೆ ಅನ್ನಿ. ಬಗೆ ಬಗೆಯ ಶಾರೀರಗಳಿಂದ ಹೊರಹೊಮ್ಮಿ ಚಿಮ್ಮುವ ವಿವಿಧ ಗಾನಗಳು.—ಸರಾಗವಾಗಿ ಸ್ನಾನದ ಮನೆಗಳಿಂದ ಮೇಲೇಳುವ ಹಬೆಯೊಂದಿಗೆ ಮೇಲ್ಹೊರಟು, ದಿಗಂತವನ್ನು ಭೇದಿಸುತ್ತ ಗಗನದಲ್ಲಿ ಮೇಳಯಿಸುತ್ತವೆ.—ಅದೊಂದು ಸಮೂಹ ಶಾರೀರ ಗಾನ.

ಅದೇನೋ ನೋಡಿ, ಸಂಗೀತಕ್ಕೂ ಬಚ್ಚಲು ಮನೆಗೂ ಗಂಟು.—ನನಗನ್ನಿಸುತ್ತೆ ಆಗಾಗ—ಇವತ್ತು ಯಾರು ಯಾರು ಸಂಗೀತದ ದಿಗ್ದಂತಿಗಳಾಗಿದ್ದಾರೋ ಅವರೆಲ್ಲರೂ, ಸಾಧನೆ ಮಾಡಿದ್ದು ಬಚ್ಚಲು ಮನೆಯಲ್ಲಿರಬೇಕು ಅಂತ.—ಇರಬೇಕೇನು...ನಿಜ ಅನ್ನಿ. ಬಚ್ಚಲು ಮನೆ ಸಂಗೀತಕ್ಕೆ ಕರ್ಮಭೂಮಿ, ಕ್ರಿಯಾಭೂಮಿ. ಅಲ್ಲಿ ಪಳಗದ ಕಂಠಗಳೂ, ಅಲ್ಲೂ ಧೈರ್ಯವನ್ನು ತಾಳದ ಶಾರೀರಗಳು ಎಂದಿಗೂ ಹಾಡಲಾರವು.

ಅದರಲ್ಲೂ ಹಾಸ್ಟಲು ಬಚ್ಚಲು ಮನೆಗಳೆಂದರೆ—ಅದೇ ಒಂದು ಜೋಕು. ಒಂದು ದಿನ ಬೆಳಿಗ್ಗೆ ಬಂದು ಕೇಳಿ....ಕೆಲವು ಕಂಠಗಳು—ಹಳೆ ಹುಲಿಗಳವು ಧೈರ್ಯವಾಗಿ ರಾರಾಜಿಸುತ್ತಾ ಹಾಡುತ್ತಿರುತ್ತವೆ. ಹಾಸ್ಟಲಿನಲ್ಲಿ ಹಳೆ ಹುಲಿ ಅಂದರೆ ಇದೊಂದು ಸ್ವಾತಂತ್ರ್ಯ. ಇತರರೆಲ್ಲಾ ಇನ್ನೂ ಚಿಕ್ಕ ಚಿಕ್ಕ ಹುಡುಗರು. ಇವರ ಕಣ್ಮುಂದೆ ಹಾಸ್ಟಲಿಗೆ ಕಾಲಿಟ್ಟವರು ಹಾಸ್ಟಲಿನಲ್ಲಿ ದಂಡ ಪಿಂಡ ತಿಂದಷ್ಟೂ, ಒಂದು ಬಗೆಯ ಗತ್ತು, ಹೆಮ್ಮೆ, ಹಿಂದು ಬರುತ್ತದೆ........ಇನ್ನೂ ಸ್ವಲ್ಪ ಹತ್ತಿರ ಹೋಗಿ....ಕೆಲವಾರು ಧ್ವನಿಗಳು ಕಿರುಧ್ವನಿಯಲ್ಲಿ ತಮ್ಮದೇ ಆದ ಶೈಲಿಯಲ್ಲಿ ಹಾಡುತ್ತಿರುತ್ತವೆ.—ಕೆಲವು ಇನ್ನೂ ಹೊಸ ಕಂಠಗಳು—ಇತರರನ್ನು ಕೇಳಿ ಕೇಳಿ ಸಹಿಸಲಾರದೆ, ತಮ್ಮದೂ ಒಂದಿರಲಿ ಅಳಿಲ ಸೇವೆ ಅಂತ ಹಾಡುವುದಕ್ಕೆ ಪ್ರಾರಂಭಿಸಿವೆ. ಆದರೂ ಧೈರ್ಯ ಸಾಲದು. ಅಂದ ಮಾತ್ರಕ್ಕೆ ಸುಮ್ಮನೆ ಕೂತರೆ ಹಾಡುವುದಕ್ಕೆ ಬರುತ್ತದೆಯೇ ...ಆದ್ದರಿಂದ ಕಿರುದನಿಯಲ್ಲೇ ಅಧೈರ್ಯದಿಂದಲೇ ಹಾಡುತ್ತಿರುತ್ತವೆ. ಮತ್ತೆ ಕೆಲವು ಕಂಠಗಳು ಹಾಸ್ಟಲಿಗೆ ಹೊಸದು ಅಷ್ಟೆ.

ಮನೆಯ ಬಚ್ಚಲಲ್ಲೇ ಸರಳ ವರಸೆಗಳನ್ನು ಕಲಿತಿರುತ್ತವೆ. ಹಾಸ್ಟಲಿಗೆ ಬಂದು ಇತರ ಗೆಳೆಯರ ಕಂಠಗಳೊಂದಿಗೆ ಸೇರಿ ಜಂಟಿವರಸೆ ಅಭ್ಯಾಸ ಮಾಡಲು ಪ್ರಯತ್ನ ಮಾಡುತ್ತಿರುತ್ತವೆ. ಆದರೂ ಧೈರ್ಯ ಸಾಲದು; ಬಿಗುಮಾನ; ಬಿಂಕ ಎಲ್ಲಾ ದರೂ ಯಾರಾದರೂ ಹಾಸ್ಯಮಾಡಿಯಾರೋ ಎಂಬ ಹೆದರಿಕೆ ಒಂದು ಕಡೆ— ಹಾಸ್ಯ ಹಾಗಿರಲಿ,—ಹಾಗೇ ಅಡ್ಡ ಹೆಸರಿಟ್ಟಾರೋ ಅಂತ ಹೆದರಿಕೆ. ನಮಗ್ಯಾ ಕಪ್ಪಾ ಈ ತಾಪತ್ರಯ ಇರೋದು ಒಂದೋ ಎರಡೋ ವರ್ಷ.....ಅವರಿವರ ಹತ್ರ ಯಾಕೆ ಜಗಳ" ಅಂತ ಒಂದು ಕಡೆ ಮನಸ್ಸು. ಆದರೆ ಮನಸ್ಸು ಸುಮ್ಮ ನಿರುತ್ತದೆಯೇ ಮನಸ್ಸು ಸುಮ್ಮನಿದ್ದರೂ ಕಂಠ ಸುಮ್ಮನಿರುತ್ತದೆಯೇ ಸಂಗೀತಕ್ಕೆ ಸರಿಯಾದ ವಾತಾವರಣ ಸಿಕ್ಕಿತು ಅಂದರೆ, ಅವರಿಗೆ ಗೊತ್ತಿಲ್ಲದೆಯೇ, ಹಾಡಲು ಪ್ರಾರಂಭಮಾಡುತ್ತದೆ. ಇನ್ನೂ ಹೊಸದಾದ್ದರಿಂದ ನಾಚಿಕೆ.—ಆದರೆ "ಎಳಗರು ಎತ್ತಾಗದೇ" ಹಾಗೆಯೇ ಇವೂ ಒಂದಾನೊಂದು ಕಾಲದಲ್ಲಿ ಧೈರ್ಯದಿಂದ ಗಗನ ವನ್ನು ಭೇದಿಸುವುದರಲ್ಲಿ ಸಂದೇಹವಿಲ್ಲ.

ಇನ್ನು ಕೆಲವು ಶಾರೀರಗಳಿವೆ. ಅವಕ್ಕೆ ಒಂದು ಬಗೆಯ ಮೊಂಡು ಧೈರ್ಯ. ಇತರರನ್ನು ಹಾಡುವುದನ್ನು ಕೇಳಿಯೇ ಈ ಧೈರ್ಯ ಅನೇಕ ಸಲ ಬರುತ್ತೆ. "ನಾನೇನು ಕಡಿಮೆ,—ಅಂತ, ಅಹಂಭಾವವೇ ಇದಕ್ಕೆ ಮೂಲಕಾರಣ ಆದರೂ ಆಗಾಗ, ಬಚ್ಚಲು ಮನೆಯ ಗೋಡೆಗಳಿಂದ ತಮ್ಮ ಸಂಗೀತವೇ ಪ್ರತಿಧ್ವನಿತ ವಾದಾಗ ನಾಚಿಕೆಯಿಂದ ಧ್ವನಿ ಕುಗ್ಗುತ್ತದೆ.—ಇದು ಕ್ಷಣಕಾಲ ಮಾತ್ರ— ದೇವರು ಒಂದು ಉಪಕಾರ ಮಾಡಿದಾನೆ ನೋಡಿ—ಬುದ್ಧಿ ತುಂಬದ ತಲೆಗೆ— ಎಲ್ಲಾ ಕೊಟ್ಟು. . . .ಮರೆವು ಅನ್ನೋದು ಒಂದು ಕೊಡದೇ ಹೋಗಿದ್ರೆ,—ಕೆರೆಕೊಳ ಗಳಲ್ಲೆಲ್ಲಾ ಹೆಣಗಳು—ಊರೆಲ್ಲಾ ಹುಚ್ಚಾಸ್ಪತ್ರೆ ಆಗುತ್ತಿತ್ತು.—ಈ ಕಂಠಗಳೂ ಹಾಗೆಯೇ—ಕೂಡಲೇ ಮರೆತು ಮತ್ತೆ ಇಮ್ಮಡಿಯಾಗಿ ಹಾಡುತ್ತವೆ.

ಕೆಲವು ಬಚ್ಚಲು ಮನೆಗಳಿಂದ ಕೆಲವು ಘಂಟಾನಾದಗಳು ಗುಡುಗುತ್ತಾ— ಸಿಡಿಲಿನಂತೆ ಬಡಿಯುತ್ತಾ, ಗೋಡೆಗಳನ್ನು ಭೇದಿಸಿಕೊಂಡು ಬರುತ್ತವೆ.—ಗಂಟಲು ಕೆರೆದುಕೊಂಡು ಜಗಳಕ್ಕೆ ಬಂದ ಹಾಗಿರುತ್ತವೆ ಅವುಗಳ ಸಂಗೀತ. ಇಂತಹ ಎರಡು ಸೇರಿದರೆ ಸಂ.... ...ಬಿರುಗಾಳಿ ಏಳುತ್ತವೆ

ಇಷ್ಟೆಲ್ಲಾ ಅಂದೆ ಅಂತ ಒಳ್ಳೆಯ ಕಂಠಗಳೇ ಇಲ್ಲವೇ ಅಂದು ನೀವು ನಿರಾಶ ರಾಗಬೇಡಿ.—ಸಿರಿಗನ್ನಡದ ಗತವೈಭವದ ಕುರುಹುಗಳು ಇನ್ನೂ ಕೆಲವು ಶಾರೀರ ಗಳಲ್ಲಿವೆ. ಆದರೆ, ಈ ಗೀತಾಂದೋಲನದಲ್ಲಿ ಸಿಕ್ಕಿಕೊಂಡು, ಗುಂಪಿನಲ್ಲಿನ ಗೋವಿಂದನ ಅವಸ್ಥೆಗೆ ಒಳಗಾಗಿ, ಮೊದಲು ಧೈರ್ಯವಾಗಿ ಮೊದಲಾದರೂ, ಕೊರಗಿ ಸೊರಗಿ, ಕಡೆಗೆ ಮುಳುಗಿಹೋಗುತ್ತವೆ.

ನಾನು ಸ್ನಾನದ ಮನೆಗೆ ಹೋಗಿ, ಗೀತಾಸಾಧನೆ ಮಾಡಿದಾಗಲೆಲ್ಲಾ, ನಾನೂ, ಅವುಗಳೊಂದಿಗೆ ನನಗೆ ಅರಿವಿಲ್ಲದೆ, ನನ್ನ ಶಾರೀರವನ್ನೂ ಮೇಳಯಿಸಿ ದಾಗಲೆಲ್ಲಾ—ನನಗೆ ಈ ಪ್ರಶ್ನೆ ಮತ್ತೆ ಮತ್ತೆ ತಲೆದೋರಿದೆ.—ಸಂಗೀತಕ್ಕೂ

ಸ್ನಾನಕ್ಕೂ ಸಂಬಂಧವೇನು. ಹೊರಗಡೆ ಹಾಡಲು ಧೈರ್ಯ ಸುತರಾಂ ಇಲ್ಲದ ಪ್ರಾಣಿಗೂಕೂಡ, ಬಚ್ಚಲುಮನೆಯೊಳಕ್ಕೆ ಕಾಲಿಟ್ಟರೆ ಗೀತಾದೇವಿ ಒಲಿಯುತ್ತಾಳೆ.

ಹಾಗೇ ಯೋಚಿಸಿದೆ ......ಯಾಕೆ ಹೀಗೆ ಅಂತ ?

ವಿಷಯ ಇಷ್ಟೇ ನೋಡಿ...... ಸ್ನಾನದ ಮನೆಯೊಳಕ್ಕೆ ಕಾಲಿಟ್ಟರೆ ನಮಗೆ ಒಂದು ಬಗೆಯ ಸ್ವಾತಂತ್ರ್ಯ ದೊರೆತ ಹಾಗೆಯೇ ... ಹೊರಗಡೆ ಇತರರ ಹಂಗು, ಗೆಳೆಯರ ಹಾಸ್ಯ—ಲೇವಡಿ—ಇದರಿಂದಲೇ ನಮಗೆ ನಾಚಿಕೆ.—ನಮ್ಮ ಗೆಳೆಯರೆಲ್ಲಾ ನಾವು ಹಾಡಿದಾಗಲೆಲ್ಲಾ ಹೂಂ ಗುಟ್ಟಿದ್ದರೆ—ನಮಗೆ ಬಚ್ಚಲುಮನೆಯನ್ನು ಮರೆಹೋಗಬೇಕಾಗಿರಲಿಲ್ಲ.—ಹಾಡುವುದರಿಂದ ಉಂಟಾಗುವ ಆನಂದ, ಸಂತೋಷ—ಹಾಡುವವರಿಗೆ ಮಾತ್ರ ಗೊತ್ತು. ಅದು ಒಂದು ಕಲೆ....ಅದಕ್ಕೆ ನೀರೆರೆದು ಬೆಳಸಿ, ಹೂವು ಕಾಯಿ ಬಿಡದಂತೆ ಗೆಳೆಯರು ಕೂಡಿ ಇಲ್ಲೇ ಲೇವಡಿ ಮಾಡಿ ಕತ್ತರಿಸುತ್ತಾರೆ. ....

ಆದರೆ ಸ್ನಾನದ ಮನೆಯಲ್ಲಿ ನಾವು ನಾವೇ........ನಮಗೆ ಕಾಂಬುದಕೆಲ್ಲಾ ... ನಾವಲ್ಲೆ ದೊರೆಯು ಒಳಕ್ಕೆ ಹೋಗಿ ಬಾಗಿಲು ಹಾಕಿದ್ದೇ ತಡ—ನಮ್ಮ ಗೆಳೆಯರು ಲೇವಡಿಕಾರರು—ಎಲ್ಲರೂ ದೂರ. ಅದು ನಮ್ಮ ರಾಜ್ಯ. ನಾವು ಹಾಡಿದ್ದೇ ಹಾಡು, ಕೂಗಿದ್ದೇ ಸಂಗೀತ.

ಸ್ನಾನದ ಮನೆಯಲ್ಲೇ ನಾವು ನಾವೇ—ನಮಗೆ ನಾವೇ. ನಮ್ಮ ಗೆಳೆಯರೆಂದರೆ ಹಂಡೆ ಚೊಂಬು ಅವುಗಳ ಮುಂದೆ ಹಾಡುವುದಕ್ಕೆ ನಾಚಿಕೆ ಎಲ್ಲಿಂದ ಬಂತು. ನಾಲ್ಕೂ ಕಡೆಯೂ ಗೋಡೆ—ನಮ್ಮ ಹಾಡು, ಗೆಳೆಯರನ್ನು ಕಂಡು ಕುಹಕವಾಗಿ ನಗುತ್ತಾ ಹೊರಹರಿಯಲು ಕಿಟಕಿ—ಏಕಾಂತತೆ ನಮಗೆ ಧೈರ್ಯವನ್ನು ಕೊಡುತ್ತದೆ,—ಕೈ ಹಿಡಿದು ನಡೆಸುತ್ತದೆ. ಗೋಡೆಗಳು ಮಾರ್ದನಿಗೊಟ್ಟು, ನಮ್ಮ ಕಿವಿಗೆ ಇಮ್ಮಡಿಯ ಇಂಪಾಗಿ ಗೀತೆಗಳು ಮೊಳಗುತ್ತವೆ.

ಇನ್ನೊಂದು ಕಾರಣ—ನಾವು ನೀರು ಹೊಯ್ದುಕೊಳ್ಳುವಾಗ,—ನೀರು ತಲೆಯಿಂದ ಕಾಲಿಗೆ ಹರಿಯುವಾಗ ಉಂಟಾಗುವ ಕಲಕಲನಿನಾದ—ಈ ಮಂಜುಳರವದೊಂದಿಗೆ ನಮ್ಮ ಸಂಗೀತವೂ ಸೇರಿ, ಬಚ್ಚಲು ಸೇರುತ್ತದೆ. ನೀವು ಯಾವತ್ತಾದರೂ ಆಲಿಸಿದ್ದೀರಾ ಆ ಶ್ರುತಿಯನ್ನು. ಆ ಶ್ರುತಿ ರಸಾಯನದೊಂದಿಗೆ, ನಮ್ಮ ಗೀತವೂ ಮೇಳಯಿಸುತ್ತದೆ.—ಇನ್ನೊಂದು ಗುಣವೇನೆಂದರೆ,—ನಮ್ಮ ಗೀತ ಹಾಗೇ ಇರಲಿ—ರಾಗ ಮಾಲಿಕೆಯೇ ಆಗಲಿ ಕಾಳಭೈರವಿಯೇ ಆಗಲಿ—ಎಲ್ಲಾ ದೇಶದ, ಎಲ್ಲಾ ಬಗೆಯ ಸಂಗೀತಕ್ಕೂ, ಕಂಠಗಳಿಗೂ ಸಮತೂಕದ ಹಿಮ್ಮೇಳವೆಂದರೆ—ನೀರಿನ ಶ್ರುತಿ. ಧ್ವನಿಯಲ್ಲಿ ಅಪಸ್ವರಗಳು ಬಂದರೆ ಅವು ಮಾಸಿ ಹೋಗುತ್ತವೆ. ಧ್ವನಿ ಹೆಚ್ಚಾದರೆ, ಶ್ರುತಿ ಧ್ವನಿಗೆ ತಕ್ಕ ಹಾಗೆ ಸೇರುತ್ತದೆ. ನಮ್ಮ ಹಾಡಿನ ಇಂಪು ಒಂದು ಕೈ ಮೇಲಾಗುತ್ತದೆ.

ಸಂಗೀತ—ಬಚ್ಚಲು ಮನೆಯಲ್ಲಿ ಲೀಲಾಜಾಲವಾಗಲು ಇನ್ನೊಂದು ಕಾರಣ ಬಿಸಿ ನೀರು. ಬಿಸಿ ನೀರಿಗೆ ಇದೊಂದು ಗುಣ ಇದೆ ನೋಡಿ, ಬಿಸಿನೀರು ಹುಯ್ದು ಕೊಂಡರೆ, ರಕ್ತ ಬಿಸಿಯಾಗುತ್ತದೆ, ನೋವು ಮಾಯವಾಗುತ್ತದೆ.—ಕಂಠ ಶಂಖ ವಂತಾಗುತ್ತದೆ. ಬಿಸಿ ನೀರು ಕಂಠವನ್ನು ಮೃದುಮಾಡಿ, ಗೀತಗಳು ತಾನಾಗೇ ಹೊರಡುವಂತೆ ಮಾಡುತ್ತದೆ!........

ಸಂ: —ಗುಂಡ ಆಗಲೇ ಮಂಗಳ ಹಾಡ್ತಾ ಇದಾನೆ........ಹೋಗ್ಬಿಟ್ಟು ಬರ್ತೀನೆ........

—ಎಂ. ವಿ. ನಾ.

ಗಾದೆಗಳು

(ಪರೀಕ್ಷೆಗಳಿಗೆ ಸಂಬಂಧಪಟ್ಟಿದ್ದು)

ಕೊಡುವುದು ಒಂದು ಕ್ವೆಶ್ಚನ್; ಬಿಡುವುದು ನೂರೆಂಟು ಬುರುಡೆ!

*   *

ರಾತ್ರಿಯೆಲ್ಲಾ ರಾಮಾಯಣ ಹೇಳಿಕೊಟ್ಟು, ಬೆಳಗಾಗುತ್ತಲೂ, ರಾಮನಿಗೂ ಸೀತೆಗೂ ಏನು ಸಂಬಂಧ, ಅಂತ ಕೇಳುತ್ತಾರೆ.

*   *

ಇನ್ನಿಲ್ಲಾ ಅಂತ ಬರೆದರೂ, ಚೆನ್ನಿಲ್ಲಾ ಅಂತ ಜರಿಯುತ್ತಾರೆ.

*   *

ಆನ್ಸರ್ ತೋರಿಸಿ, ಅವಲಕ್ಷಣ ಅಂತ ಅನ್ನಿಸಿಕೊಂಡ ಹಾಗೆ.

*   *

ಗುರುಗಳು ಕಲಿಸಿದ್ದು ಠಕ್ಕು; ಹುಡುಗ ನಂಬಿದ್ದು ಲಕ್ಕು.

*   *

ದಡ್ಡನ ಹಿಂದಿನ ಸೀಟ್‌ನಲ್ಲಿ ಕೂರಬಾರದು; ಪೆಚ್ಚನ ಪಕ್ಕದ ಸೀಟ್‌ನಲ್ಲಿ ಕೂಡ ಬಾರದು.

*   *

ಕೆಟ್ಟ ಮೇಲೆ ಬುದ್ಧಿ ಬಂತು; ಕೊಟ್ಟ ಮೇಲೆ ಉತ್ತರ ಹೊಳೆಯಿತು.

*   *

ಪಾಸಿಗೆ ಹಾರದ ಬಡ್ಡಿ, ಕ್ಲಾಸಿಗೆ ಹಾರ್‍ಯಾಳೆಯೇ.

*

ಇಂಗ್ಲೀಷ್ ಓದಿ ಶಿಂಗ್ಲೀಕನಾದ

—ನಾ. ಕ.

ಅ-ಶಾಂತಿ ಸಮ್ಮೇಳನ

(19-?-)

(ಭಾರತಕ್ಕೆ ಸಂಬಂಧಿಸಿದಂತೆ)

ಯುದ್ಧಾನಂತರದ ನಿರ್ಮಾಣಕ್ಕೆಂದು ಯುದ್ಧ ನಿಂತ ಮಾರನೆಯ ದಿನವೇ ಈ ಸಭೆಯನ್ನು ಕರೆಯಲಾಯಿತು. ಈ ಸಭೆಗೆ ಅಮೆರಿ-ಪಾರ್ಲಿಮೆಂಟಿನ ಪ್ರತಿನಿಧಿಯಾಗಿ ಸರ್ ಸ್ಟ್ಯಾಫರ್ಡ್ ಕ್ರಿಪ್ಸರು ನಡಿಗೆಯಲ್ಲೇ ಭಾರತಕ್ಕೆ ಬಂದಿದ್ದರು. ಸಭೆಯ ಇಷ್ಟದಂತೆ ಅವರೇ ಅಧ್ಯಕ್ಷತೆ ವಹಿಸಿದ್ದರು. ಈ ಸಭೆಗೆ ಉಪಾಧ್ಯಕ್ಷರಾಗಿ ಶ್ರೀ ಲಿನ್‌ಲಿತ್‌ಗೋರವರು, ಪಂಚಮರ ಪ್ರತಿನಿಧಿಯಾಗಿ ಡಾ|| ಅಂಬೇಡಕರ್, ಸೈನ್ಯದ ಪರವಾಗಿ ಫೀಲ್ಡ್ ಮಾರ್ಷಲ್ ವೇವಲ್ಲರು, ಜನರ ಪರವಾಗಿ ಜವಹರಲಾಲರು, ಹಿಂದೂಗಳ ಪರವಾಗಿ ಸಾವರಕರರು, ಮುಸ್ಲಿಂರ ಪರವಾಗಿ ಜಿನ್ನಾರವರು, ಅಪಜಯ ಸಂಘದ ಪರವಾಗಿ ಸಿ. ಆರ್‌ರು. (Defeatist party) ಇಲ್ಲದ ಪಾರ್ಟಿಯ ಪರವಾಗಿ ಸಪ್ರೂ ಜಯಕರ ದ್ವಂದ್ವವೂ, ಆಂಧ್ರರ ಪರವಾಗಿ ಶ್ರೀ ಪ್ರಕಾಶರು, ಇತರ ಜಾತೀಯ, ಮತೀಯ, ಪ್ರಾಂತೀಯ ಪ್ರತಿನಿಧಿಗಳೂ, ದೇಶೀಯ ಸಂಸ್ಥಾನಗಳ ಪರವಾಗಿ ಸರ್ ವಿಜಯರವರೂ, ಮುಂತಾದವರೂ ಇನ್ನೂ ಅನೇಕರೂ ಹಾಜರಿದ್ದರು.

ಈ ಸಭೆಗೆ ಬನ್ನಿರೆಂದು ಆಹ್ವಾನ ಹೋಗಿದ್ದರೂ (ಇವರು ಯಾರ ಪಕ್ಷಕ್ಕೂ ಸೇರಿರದೆ ಸ್ವತಂತ್ರರಾಗಿದ್ದರು) ಅಭಾಗ್ಯ ಭಾರತದ ಭಾಗ್ಯವಿಧಾತರೆನಿಸಿದ ಎಂ. ಕೆ. ಗಾಂಧಿಯವರು ಬರಲಾಗಲಿಲ್ಲ. ಸೇವಾಗ್ರಾಮದಲ್ಲಿ ಹೊಟ್ಟೆನೋವಿನಿಂದ ನರಳುತ್ತಿದ್ದ ಒಂದು ಹಸುವೇ ಇದಕ್ಕೆ ಕಾರಣವೆಂದು ನಂಬಲಾಗಿದೆ.

ಈ ಸಭೆಗೆ ಸುಭಾಶಯವನ್ನು ಕೋರಿ ಕಳುಹಿದ್ದ ಶ್ರೀ ಚರ್ಚ್‌ಹಿಲ್, ಶ್ರೀಮತಿ ಮತ್ತು ಶ್ರೀ ಚೈಂಗ್ ಕೈಷೇಕ್, ಶ್ರೀ ರೂಸುವೆಲ್ಟ್, ಶ್ರೀ ಸ್ಟಾಲಿನ್‌ರ ತಂತಿಗಳನ್ನು ಓದಿ, ರಿಕಾರ್ಡು ಮಾಡಲಾಯಿತು. ಪ್ರಾರ್ಥನೆಯಾದನಂತರ ಉಪಹಾರವಾಯಿತು. ಅನಂತರ ಈ ಕೆಳಗ ಕಂಡ ತೀರ್ಮಾನಗಳಾದುವು.

೧. ದುಷ್ಟ ಶಿಕ್ಷಣ, ಶಿಷ್ಟ ರಕ್ಷಣವೇ ಪ್ರಧಾನವಾಗಿದ್ದ ಈ ಯುದ್ಧದಲ್ಲಿ ವಿಜಯಿಗಳಾದುದಕ್ಕೆ ಜನರನ್ನು ಈ ಸಭೆ ಅಭಿನಂದಿಸಿ, ದೇವರಿಗೆ ತನ್ನ ನಮ್ರ ನಮಸ್ಕಾರಗಳನ್ನು ಸಲ್ಲಿಸುತ್ತದೆ.

೨. ಕಂಟಕ ತ್ರಿಮೂರ್ತಿಗಳೆನಿಸಿದ್ದ ಹಿಟ್ಲರ್-ಟೋಜೋ-ಮುಸಲಿನಿಯವರು ರಣರಂಗದಲ್ಲಿ ಸೋತಿದ್ದಕ್ಕೆ ಈ ಸಭೆ ತನ್ನ ಸಂತೋಷವನ್ನು ಸೂಚಿಸುತ್ತದೆ. ಇನ್ನು ಮೇಲೆ ಇಂತಹ ನಾಯಕರು ಹುಟ್ಟದಿರಲೆಂದು ತಾಯಂದಿರಿಗೂ, ಸೃಷ್ಟಿಕರ್ತನಿಗೂ ಈ ಸಭೆ ಬಿನ್ನವಿಸುತ್ತದೆ.

೩. ಭಾರತದಲ್ಲಿ ಪ್ರಜಾಪ್ರಭುತ್ವ ಸ್ಥಾಪಿತವಾಗಬೇಕೆಂದೂ—ಆ ಯೋಜನೆಯೇ ಭಾರತಕ್ಕೆ ಸರಿಯಾದುದೆಂದೂ—ಈ ಸಭೆ ತೀರ್ಮಾನಿಸುತ್ತದೆ. ಯುದ್ಧದ ಕಾವು, ಅಶಾಂತಿಯ ನೋವು, ಅಂತರ್ಜಗಳಗಳಿಂದ ಚೇತರಿಸಿಕೊಂಡಿಲ್ಲವಾಗಿ ಸ್ವಾತಂತ್ರ್ಯದ ಆರಂಭ ದಿನವನ್ನು ಇನ್ನೂ ಮುಂದುವರಿಸುವಂತೆ ಈ ಸಭೆ ತೀರ್ಮಾನಿಸುತ್ತದೆ. (ಈ ನಿರ್ಣಯ ತೀರ್ಮಾನವಾಗುವಾಗ ಅನೇಕರು ಎದ್ದು ಹೋದರೆಂದು ತಿಳಿಯಬಂದಿದೆ. ಬ್ಲಾಕ್-ಔಟ್-ಆದ್ದರಿಂದ ಯಾರು ಯಾರು ಎದ್ದು ಹೋದರೆಂದು ಹೇಳಲು ಸಾಧ್ಯವಿಲ್ಲ).

೪. ಇನ್ನು ಮೇಲೆ ಸಂಸ್ಥಾನಗಳಿಲ್ಲ. ಭಾರತದಲ್ಲಿ ಭೇದವಿಲ್ಲ. ಒಂದೇ ಭಾರತ. ಒಂದೇ ತಾಯ ಮಕ್ಕಳು ನಾವು. ಪಾಕಿಸ್ಥಾನವೂ ಇಲ್ಲ. ಬೇಕಿಸ್ಥಾನವೂ ಇಲ್ಲ. ದ್ರವಿಡ ಸ್ಥಾನವೂ ಇಲ್ಲ. ಈ ಯೋಜನೆಗೆ ಇಷ್ಟವಿರದವರು ಬಂಗಾಳಾ ಕೊಲ್ಲಿಯ ಕಡೆ ಪ್ರಯಾಣ ಬೆಳೆಸಬಹುದೆಂದು ಈ ಸಭೆ ಆಗ್ರಹಪೂರ್ವಕವಾಗಿ ಒತ್ತಾಯಮಾಡುತ್ತದೆ.

೫. ಬರುವ ಭಾರತದಲ್ಲಿ ಹಳ್ಳಿಗಳೆಂಬ ಪ್ರಶ್ನೆಯೇ ಇಲ್ಲ. ಎಲ್ಲಾ ಹಳ್ಳಿಗಳೂ ತಮ್ಮಷ್ಟಕ್ಕೆ ತಾವೇ ಪಟ್ಟಣಗಳಾಗಬೇಕು; ಇಲ್ಲವೆ ನಾಶವಾಗಬೇಕು. "ಬೆಳೆಯಲಿ ಇಲ್ಲವೆ ಬಾಡಲಿ."

೬. ಆರ್ಥಿಕ ಮುಗ್ಗಟ್ಟು ಭಾರತಕ್ಕೆ ಒದಗಿರುವುದರಿಂದ ಇನ್ನು ಮೇಲೆ ಮನೆಯಲ್ಲಿ ಅಡಿಗೆ ಮಾಡುವುದನ್ನು ಈ ಸಭೆ ನಿಷೇಧಿಸುತ್ತದೆ. ಇಂದಿನಿಂದ ಎಲ್ಲರೂ ಹೋಟಲುಗಳಲ್ಲೇ ಊಟಮಾಡಬೇಕು. ಮೋಸದ ವ್ಯಾಪಾರ, ಅನ್ನ ಸಾಮಗ್ರಿಗಳು ಹಾಳಾಗುವಿಕೆಯನ್ನು ತಪ್ಪಿಸಲೋಸುಗವೇ ಈ ಯೋಜನೆ. ಈ ವಿಷಯವಾಗಿ ಹೆಚ್ಚು ತೀರ್ಮಾನಗಳನ್ನು ಮಾಡಲು ಒಂದು ಸಮಿತಿ ರಚಿಸಲ್ಪಡುವುದು.

ಅನ್ನದಂತೆಯೇ ಬಟ್ಟೆಯ ಪ್ರಶ್ನೆ ಬಹಳವಾಗಿ ಬಾಧಿಸುತ್ತದೆಯಾದ್ದರಿಂದ ಯಾರೂ ಇನ್ನು ಮೇಲೆ ಹೆಚ್ಚು ಬಟ್ಟೆ ತೊಡಕೂಡದೆಂದು ಈ ಸಭೆ ತೀರ್ಮಾನಿಸಿದೆ. ಈ ಯೋಜನೆಗೂ ಒಂದು ಸಮಿತಿ ಏರ್ಪಡುವುದು.

೭. ಇನ್ನು ಮುಂದೆ ಎಲ್ಲರೂ ಒಂದೇ. ಎಲ್ಲರಿಗೂ ಒಂದೇ ಸಂಬಳ. ಒಂದೇ ಆಶಯ. ಮುದುಕರು, ಮಕ್ಕಳೂ, ಹೆಂಗಸರು, ಗಂಡಸರು—ಎಲ್ಲರಿಗೂ ಒಂದೇ ತೆರನೆ ಅವಕಾಶ, ಒಂದೇ ರೀತಿಯ ವಿನಿಯೋಗ.

೮. ಇನ್ನು ಮೇಲೆ ಜಾತಿಭೇದವಾಗಲಿ, ವರ್ಣವಿಪರೀತವಾಗಲಿ ಇರುವುದಿಲ್ಲ. ಒಟ್ಟಿಗೆ ಊಟ! ಅಂತರ್ಮದುವೆ ಜಾರಿಗೆ ಬರಬೇಕು. ಮದುವೆಗೆ ವಯಸ್ಸಿನ ತೊಂದರೆಯಿಲ್ಲ. ಇಷ್ಟವಿದ್ದರೆ ಕಿರಿಯರನ್ನಾಗಲಿ, ಹಿರಿಯರನ್ನಾಗಲಿ ಮದುವೆಯಾಗಬಹುದು. ಯಾರನ್ನಾದರೂ ಮದುವೆಯಾಗಲಿ, ಆದರೆ ಗಂಡಸು

ಹೆಂಗಸನ್ನೂ, ಹೆಂಗಸು ಗಂಡಸನ್ನೂ ಮದುವೆಯಾಗಬೇಕು. ಇದೊಂದೇ ಕಟ್ಟಳೆ. ಶಾಸ್ತ್ರದ ನಿಯಮವಾಗಲಿ, ಆಚಾರದ ಆರಾಧನೆಯಾಗಲಿ ಮದುವೆಗೆ ಅಡ್ಡವಿಲ್ಲ.

೯. ದೇವರು ಒಬ್ಬನೇ !!!

ಆದ್ದರಿಂದ ಗುಡಿ, ಮಸೀದಿ, ಧರ್ಮಶಾಲೆಗಳನ್ನು ನೆಲಸಮ ಮಾಡಿ ಸರ್ಕಾರ ಅವನ್ನು ವಶಪಡಿಸಿಕೊಳ್ಳುವುದು. ಹೀಗೆಯೇ ಬ್ಯಾಂಕು, Factory, ಅಂಗಡಿಗಳ ಆಸ್ತಿಯನ್ನೆಲ್ಲಾ ಸರ್ಕಾರವೇ ವಶಪಡಿಸಿಕೊಳ್ಳುವುದು. ಇನ್ನು ಮೇಲೆ ಸ್ವಂತ ಆಸ್ತಿ ಎಂಬುದಿಲ್ಲ. ತಿನ್ನಲಿಕ್ಕೆ ಸಾಕಷ್ಟು ಹೋಟಲಿನಲ್ಲಿ ಸಿಗುವುದು. ಆರ್ಜಿತವಾಗಲಿ, ಊರ್ಜಿತವಾಗಲಿ, ಆಸ್ತಿಯೇ ಇಲ್ಲ. ಉಳಿಸುವುದೂ ಇಲ್ಲ, ಗಳಿಸುವುದೂ ಇಲ್ಲ. ಬಂದದ್ದನ್ನು ತಿನ್ನುವುದು.

ಇನ್ನು ಮೇಲೆ ಮಾಡಿದ ಕೆಲಸಕ್ಕೆ ಹಣ ಸಿಗುವುದಿಲ್ಲ—ಬೆಳ್ಳಿಯ ಅಭಾವದಿಂದ. ಬರಿಯ ನೋಟುಗಳೇ ಚಲಾವಣೆಗೆ. ಕೆಲಸಮಾಡಿದವರಿಗೆ ಮಾತ್ರ ಈ ನೋಟುಗಳು.

ಹಣ

ಊಟ

ಕೆಲಸ ಉಡಿಗೆ

ವಿಶೇಷ ಪದಾರ್ಥ

ದುಡಿಯಲು ಶಕ್ತಿ

೧೧. ನ್ಯಾಯ ಮಂದಿರಗಳೂ, ಆಸ್ಪತ್ರೆ, ಅಂಚೆ ಮನೆಗಳೂ ಬೀದಿ ಬೀದಿಯಲ್ಲೂ ಇರಬೇಕು.

೧೨. ಗೋವಧೆಯನ್ನು ನಿಲ್ಲಿಸಲು ಈ ಸಭೆ ಸಂತೋಷವಾಗಿ ತೀರ್ಮಾನಿಸುತ್ತದೆ. ಗೋವಿಗೆ ಬದಲು ಗಧಾವಧೆ (ಕತ್ತೆಯ ಸಂಹಾರ) ನಡೆಸಬಹುದು. ಗೋವಿನಷ್ಟೇ ಕತ್ತೆಯೂ ಈ ವಿಧಗಳಲ್ಲಿ ಉಪಯೋಗಕ್ಕೆ ಬರಲು ಆಗುವುದೆಂದು ವಿಜ್ಞಾನಿಗಳ ಅಭಿಪ್ರಾಯ.

೧೩. ದೇಶದಲ್ಲಿರುವ ಸರ್ವ ಸಂಪತ್ತನ್ನೂ, ಭೂಮಿಯನ್ನು ಎಲ್ಲರಿಗೂ ಸಮನಾಗಿ ಹಂಚಲಾಗುವುದು. ಒಬ್ಬ ತಂದೆಯ ಆಸ್ತಿಯನ್ನು ಮಕ್ಕಳಿಗೆ ಹಂಚಿದಂತೆ!

೧೪. ಎಲ್ಲಾ ಮನೆಗಳನ್ನೂ ನಾಶಪಡಿಸಲಾಗುವುದು. ಇನ್ನು ಮುಂದೆ ಎಲ್ಲರೂ ರೂಮುಗಳಲ್ಲಿ ವಾಸಿಸಬೇಕು ಇದಕ್ಕಾಗಿ ಕಟ್ಟಡದ ನಿರ್ಮಾಣ ಆರಂಭವಾಗುವುದು. ಮದುವೆಯಾದವರಿಗೆ ಎರಡು ರೂಮು ಕೊಡಲಾಗುವುದು.

ಮಕ್ಕಳು ಹುಟ್ಟಿದೊಡನೆ ಆಸ್ಪತ್ರೆಯಲ್ಲಿ ಆರು ತಿಂಗಳು ಜೀವನ. ಅನಂತರ ೧೦ ವರ್ಷದ ವರೆಗೆ ಶಿಶುವಿಹಾರದಲ್ಲಿ ಪೋಷಣೆ, ಮುಂದೆ ಶಾಲೆಯ ನಿಲಯದಲ್ಲಿ ವಾಸ. ಹೀಗೆ ಜೀವನದಲ್ಲಿ ಕೆಲಸವಾಗುವವರೆಗೆ ಜೀವನ ನಡೆಸಬೇಕು.

೧೫. ಎಲ್ಲರಿಗೂ ವಿದ್ಯಾಭ್ಯಾಸವಾಗಲೇ ಬೇಕು. ಇದರಲ್ಲಿ ಬ್ರಾಹ್ಮಣ-ಅಬ್ರಾಹ್ಮಣ-ಮಹಮ್ಮದೀಯವೆಂಬ ಭೇದವಿಲ್ಲದೆ ನೋಡಲಾಗುವುದು.

೧೬. ದುಡಿದರೆ ದುಡ್ಡು, ಹಣೆಯ ಹನಿ ಹರಿಸಿದರೆ ಹಣ, ಇನ್ನು ಮೇಲೆ ಇದೇ ಸಂಪ್ರದಾಯ. ೫೫ ವರ್ಷಗಳಾದ ಮೇಲೆ ಕೆಲಸ ಮಾಡಬೇಕಾಗಿಲ್ಲ. ೨೨ ವರ್ಷಗಳಾದ ಮೇಲೆ ಕೆಲಸದ ಆರಂಭ.

ಸಭೆ ಮುಂದೆ ಸಾಗುತ್ತಿದೆ.

(ತಂತಿ ಅಪೂರ್ಣ)

—ಶರತ್.



“ ಅಳಬೇಡ ಆನೆ ತೋರಿಸ್ತೀನಿ ಕುದುರೆ ಬೇಡದೆ ಇದ್ರೆ........

ಲೇ, ಬೇಗಬಾರೆ ಮಗು ಬಹಳ ಅಳುತ್ತೆ ”

ನಮ್ಮ ದೊಡ್ಡಪ್ಪ

'ಆತುರಗಾರನಿಗೆ ಬುದ್ಧಿ ಮಟ್ಟು' ಅಂತ ಒಂದು ಗಾದೆ. ನಮ್ಮ ದೊಡ್ಡಪ್ಪನಿಗೆ ಆತುರ ಮೈತುಂಬ ತುಂಬಿದೆ. ಬುದ್ಧಿ ಮಟ್ಟೋ ಇಲ್ಲವೋ ಎನ್ನುವುದನ್ನು ನಾವಿನ್ನೂ ಕಂಡುಹಿಡಿಯುತ್ತಲೇ ಇದ್ದೇವೆ. ದೊಡ್ಡಪ್ಪ ಹುಟ್ಟಿದಾಗಿನಿಂದ ಹೀಗೇ ಅವಸರ ಪ್ರಕೃತಿಯೇ ಅಂತೆ. ಅವನು ಹುಟ್ಟಿದ್ದೂ ಆತುರವಾಗಿಯೇ. ಪ್ರಪಂಚವೆಲ್ಲ ಈ ಹೊಸ ವ್ಯಕ್ತಿಯನ್ನು ಸ್ವಾಗತಿಸಲು ಸಿದ್ಧವಾಗುತ್ತಿದ್ದ ಹಾಗೆಯೇ, ಮನೆಯವರೆಲ್ಲ ಬಿಡುವಾಗಿ ಉಸಿರೆಳೆಯುತ್ತಿದ್ದಾಗಲೇ, ಒಟ್ಟಿಗೆ ಎಲ್ಲರಿಗೂ ಮೋಸಮಾಡಿ ದೊಡ್ಡಪ್ಪ ಏಳು ತಿಂಗಳಿಗೇ ಈ ಲೋಕದಲ್ಲಿ ಅವತರಿಸಿಬಿಟ್ಟ. ಆ ದಿನ ಪ್ರಾರಂಭವಾದ ಪರಕಲಾಟ, ಎಡರು ತೊಡರಿಲ್ಲದೆ, ಒಬ್ಬರ ವಿರೋಧವಿಲ್ಲದೆ ಇನ್ನೂ ಇದುವರೆಗೂ ಬೆಳೆಯುತ್ತಿದೆಯೇ ಹೊರತು ಕಡಿಮೆಯಾಗಿಲ್ಲ. ಸುತ್ತುಮುತ್ತಿನವರೆಲ್ಲ ಆ ಅವಸರವನ್ನು ಆದರದಿಂದ ಪೋಷಿಸಿಕೊಂಡೇ ಬಂದಿದ್ದಾರೆ.

ಹುಟ್ಟಿದ್ದು ಅವಸರವಾದ ಮೇಲೆ ನಡೆದಾಡಿದ್ದೂ, ಮಾತಾಡಿದ್ದೂ ಬೇಗಲೇ. ಆ ಮೇಲೆ ಶಾಲೆ. ಶಾಲೆ ಹನ್ನೊಂದು ಗಂಟೆಗಾದರೆ ದೊಡ್ಡಪ್ಪ ಶಾಲೆಯ ಬಳಿ ಇರುತ್ತಿದ್ದುದು ಒಂಬತ್ತು ಗಂಟೆಯ ಹೊತ್ತಿಗೆ. ಒಲೆಯ ಮೇಲೆ ಕುದಿಯುತ್ತಿದ್ದ ಅಡಿಗೆಯಲ್ಲಿ ಆದಷ್ಟು ಹೊಟ್ಟೆಗೆ ಸುರಿದುಕೊಂಡು, ಅದಕ್ಕೋಸ್ಕರ ಅಮ್ಮನ ಹತ್ತಿರ ಬೈಗಳ ತಿಂದು ಏಳುತ್ತ ಬೀಳುತ್ತ ಓಡಿ ಶಾಲೆ ಸೇರುವ ಹೊತ್ತಿಗೆ ಒಂಬತ್ತು ಗಂಟೆ ಆದರೆ ಹೆಚ್ಚು. ಅಲ್ಲಿ ಶಾಲೆ ತೆಗೆದಿರುತ್ತಿರಲಿಲ್ಲ, ಅಥವಾ ತೆಗೆದಿದ್ದರೆ ಆಳು ಕಸ ಹೊಡೆಯುತ್ತಿದ್ದ. ಪ್ರತಿನಿತ್ಯ ತಾನು ಕಸಗುಡಿಸುವ ಸಮಯಕ್ಕೆ ಸರಿಯಾಗಿ ಕಾಣಿಸಿಕೊಳ್ಳುವ ಈ ಹುಡುಗನನ್ನು ನೋಡಿ ಆಳು ಉರಿದುರಿದು ಬೀಳುತ್ತಿದ್ದ. ಈ ಪೋರನ ಮುಂದೆ ನಡುಬಗ್ಗಿಸಿ ಕೆಲಸಮಾಡುವುದು ಅವನಿಗೆ ಸ್ವಲ್ಪವೂ ಇಷ್ಟವಿರಲಿಲ್ಲ. ಅಲ್ಲಿ ಮನೆಯಲ್ಲಾದಂತೆ ದೊಡ್ಡಪ್ಪನಿಗೆ ಇಲ್ಲೂ ಚೆನ್ನಾಗಿ ಬೈಗಳ ಬೀಳುತ್ತಿತ್ತು. ಆಳು ಬಾಯಿಗೆ ಬಂದಂತೆಲ್ಲ ಬೈದು 'ಇನ್ನೊಂದು ಸಲ ಹೀಗೇ ಬಂದರೆ ನಿನ್ನೂ ಗುಡಿಸಿ ಬಿಸಾಡತೀನಿ ನೋಡಿಕೊ' ಅಂತ ಹೆದರಿಸಿ ದೊಡ್ಡಪ್ಪನನ್ನು ಅಲ್ಲಿಂದ ಓಡಿಸಿಬಿಡುತ್ತಿದ್ದ.

ಈ ಮಾತೆಲ್ಲ ದೊಡ್ಡಪ್ಪನೇ ನಮಗೆ ಹೇಳಿದ್ದು. ತಮ್ಮ ಚಿಕ್ಕಂದಿನ ಅವಿವೇಕವನ್ನು ಎಳೆಯರಿಗೆ ಹೇಳಿ ಹಿಗ್ಗಿ ಹೆಮ್ಮೆಪಡುವ ರೀತಿ ಆ ಮಾತಿನಲ್ಲಿರುತ್ತಿರಲಿಲ್ಲ. ದೊಡ್ಡಪ್ಪನನ್ನು ಈಗ ನೋಡುವ ನಮಗೆ ತನ್ನ ಹಿಂದಿನ ಸ್ವಭಾವಕ್ಕೆ ಅವನು ಪಶ್ಚಾತ್ತಾಪ ಪಡುವುದಿಲ್ಲವೆಂದರೆ, ಅದೇನೂ ಆಶ್ಚರ್ಯದಮಾತಾಗಿ ತೋರುವುದಿಲ್ಲ. ಈಗಲೂ, ಈ ವಯಸ್ಸಿನಲ್ಲೂ ಅವಸರ ಅವನ ಅಂತರಂಗದಲ್ಲಿ ತುಂಬಿದೆ. ಅವನ ನರನರಗಳಲ್ಲಿ ಹರಿಯುತ್ತಿದೆ. ಇಷ್ಟಾದರೂ ನಮ್ಮ ದೊಡ್ಡಪ್ಪನ ಇಬ್ಬರು ಮಕ್ಕಳೂ

ತುಂಬ ತಾಳಿ ಬಾಳುವವರು. ಶಾಲೆಯಲ್ಲಿ ಯಾವ ತರಗತಿಯಲ್ಲೂ ಅವರು ಮೊದಲ ವರ್ಷವೇ ಉತ್ತೀರ್ಣರಾಗುವ ಆತುರ ತೋರಲೇ ಇಲ್ಲ. ನಿಧಾನವಾಗಿ ತೇರ್ಗಡೆಯಾಗಿ ಈಗ ಸಾವಧಾನವಾಗಿ ಕೆಲಸ ಹುಡುಕುತ್ತಿದ್ದಾರೆ.

ಇಂಥ ಅವಸರ ಪ್ರಕೃತಿಯ ದೊಡ್ಡಪ್ಪನ ಸಹವಾಸವನ್ನೇ ಬಿಟ್ಟು ದೂರ ಇರುವುದು ನಮಗೆ ಸಾಧ್ಯವಾಗಿಲ್ಲ. ಮನೆಯಲ್ಲೇ ಕೂತು ಕೂತು ಬೇಸರವಾಗಿ ಎಲ್ಲಾದರೂ ಹೊರಗೆ ಹೋಗೋಣವೆಂದಾಗ, ಅಮ್ಮನನ್ನು ಕೇಳಿದರೆ, "ಹೆಣ್ಣು ಮಕ್ಕಳು ಮನೆಯಲ್ಲೇ ಇರಬೇಕು; ಅದೇನು ಹೊರಗೆಲ್ಲಿ ಹೋಗಬೇಕೆನ್ನುತ್ತೀರಿ? ಸುಮ್ಮನೆ ನನ್ನ ಪ್ರಾಣ ತಿನ್ನಬೇಡಿ" ಎಂದು ಅವಳು ಸಿಡಕುತ್ತಾಳೆ. ಅಪ್ಪ ಮನೆಗೆ ಬರುವುದು ರಾತ್ರಿಯಾದಾಗ. ಕೊನೆಗೆ ಸೋತವರಾಗಿ ನಾವು ದೊಡ್ಡಪ್ಪನನ್ನು ಆಶ್ರಯಿಸಲೇ ಬೇಕು. ದೊಡ್ಡಪ್ಪ ಇದನ್ನೆಲ್ಲ ನಿರೀಕ್ಷಿಸಿ ನಮ್ಮ ಸ್ಥಿತಿಯನ್ನು ಚೆನ್ನಾಗಿ ಮುಂದಿಟ್ಟು ಮಾಡಿಕೊಂಡು ತನ್ನ ಮನಸ್ಸಿಗೆ ಬಂದಂತೆ ನಮ್ಮನ್ನು ನಡೆಸಿಕೊಳ್ಳುತ್ತಾರೆ.

ಅವತ್ತು ದೊಡ್ಡಪ್ಪ ಕೈಲಿ ಒಂದು ಚೀಟಿ ಹಿಡಿದು ಆತುರವಾಗಿ ಮನೆಯೊಳಗೆ ನುಗ್ಗುತ್ತಿದ್ದ. ಈ ದೊಡ್ಡಪ್ಪನ ಸಹವಾಸದ ಅನುಭವ ಪೂರ್ತಿಯಾಗಿದ್ದ ನಮಗೆ ಆ ಚೀಟಿ, ಯಾವುದೋ ಒಂದು ಉಪನ್ಯಾಸ ಇಲ್ಲಿ ಎಲ್ಲೋ ಹತ್ತಿರವೇ ನಡೆಯುವು ದನ್ನು ತಿಳಿಸುತ್ತದೆಂದು ಚೆನ್ನಾಗಿ ಗೊತ್ತು. ಆ ಉಪನ್ಯಾಸ ಕನ್ನಡದ್ದೇ ಇರ ಬಹುದು. ಸಾಹಿತ್ಯದ ವಿಷಯವಾಗಿಯೇ ಇರಬಹುದು. ನಮಗೆ ಗಾಬರಿಯಾಗಿ ದೊಡ್ಡಪ್ಪನಿಗೆ ಕಾಣದಂತೆ ಕೋಣೆಯಲ್ಲಿ ಬಚ್ಚಿಟ್ಟುಕೊಂಡೆವು. ಬೀದೀ ಬಾಗಿಲ ಹತ್ತಿರದಿಂದ ದೊಡ್ಡಪ್ಪ, "ಇಲ್ಲಿ ಬನ್ರೇ, ನೋಡಿ ಈ ಚೀಟೀನ" ಅಂತ ಕೂಗು ತ್ತಲೇ ಇದ್ದ. ಅವಿತುಕೊಂಡಿದ್ದರೆ ಸಾಗದೆಂದು ನಾವು ಒಬ್ಬೊಬ್ಬರಾಗಿ ಈಚೆಗೆ ಬಂದೆವು. ದೊಡ್ಡಪ್ಪನ ಕೈಲಿದ್ದ ಚೀಟಿಯನ್ನು ನಾನು ಬಗ್ಗಿ ನೋಡಿದೆ. ಕೊನೆ ಯಲ್ಲಿ 'ಎಲ್ಲರಿಗೂ ಸುಸ್ವಾಗತವಿದೆ' ಎಂದು ಸ್ಪಷ್ಟವಾಗಿ ಬರೆದಿತ್ತು. ಇನ್ನು ದೊಡ್ಡಪ್ಪನನ್ನೂ, ನಮ್ಮನ್ನೂ ಬೇರೆ ಏನೂ ಕರೆಯಬೇಕಾಗಿಲ್ಲ. "ನಾಳೆ ದಿನ ಸಂಜೆ ನಾಲ್ಕು ಗಂಟೆಗೆ ಸಿದ್ಧವಾಗಿಬಿಡಿ, ಎಲ್ಲರೂ ಹೋಗೋಣ, ಇಲ್ಲೇ ಹತ್ತಿರ, ಹೆಚ್ಚು ನಡೆಯಬೇಕಾಗಿಲ್ಲ" ಎಂದು ದೊಡ್ಡಪ್ಪ ಶಿಕ್ಷೆ ವಿಧಿಸಿಯೇ ಬಿಟ್ಟ. ಉಪ ನ್ಯಾಸ ಇದ್ದದ್ದು ಆರು ಗಂಟೆಯ ಹೊತ್ತಿಗೆ. "ಅಲ್ಲಿ ಪ್ರಾರಂಭವಾಗೋದು ಆರು ಗಂಟೆಗೆ, ನಾಲ್ಕು ಗಂಟೆಗೇ ಯಾಕೆ ಹೋಗಬೇಕು?" ಅಂತ ನಾನು ಕೇಳಿದೆ. "ಕಣ್ಣು ಕಾಣಿಸೋದಿಲ್ಲವೆ, ಉಪನ್ಯಾಸಕರು ಯಾರು ಅಂತ, ಜನ ಸಂತೇಲಿ ತುಂಬಿದ ಹಾಗೆ ತುಂಬುತಾರೆ, ನಿಮಗೋಸ್ಕರ ಯಾರು ಜಾಗ ಇಟ್ಟುಕೊಂಡಿರು ತಾರೆ ಅಂತ ತಿಳಕೊಂಡಿದೀರಿ? ಉಪನ್ಯಾಸದ ವಿಷಯವಾದರೂ ನೋಡಿ, 'ಕನ್ನಡದ ಕೊಲೆಪಾತಕರು' ಅಂತ ಇಂಥ ವಿಷಯ ಆರಿಸಿಕೊಳ್ಳೋ ಅಷ್ಟು ಧೈರ್ಯ ಕನ್ನಡಿಗರಿಗಿದ್ದ ಮೇಲೆ, ಕನ್ನಡ ನಾಡಿನ ಭಾಗ್ಯರವಿಯ ಉದಯ ಆದ ಹಾಗೆ....." ದೊಡ್ಡಪ್ಪ ಅಲಂಕಾರ ಸಹಿತವಾಗಿ ಇನ್ನೂ ಮಾತುಗಳನ್ನು ಪೋಣಿಸುತ್ತಲೇ ಇದ್ದ. ಕೊನೆಗೆ ನಾವು ಬೆಪ್ಪಾಗಿ ಏನೂ ತೋರದೆ, ಈ ಸಲಕ್ಕೆ ಬಿಡುಗಡೆ ಮಾಡು,

ಎಂದು ಸಾಕಾಗಿ ನಿಂತು ಬೇಡಿಕೊಂಡೆವು. ದೊಡ್ಡಪ್ಪ ಒಪ್ಪಲಿಲ್ಲ. "ಏನ್ರೀ, ನಿಮ್ಮನ್ನ ಹಿಂದೀ ಸಿನೀಮಕ್ಕೆ ನಾನು ಕರಕೊಂಡು ಹೋಗೊಲ್ಲವೆ? ಹಿಂದಿ ಅರ್ಥವಾಗದಿದ್ದರೂ, ನಾನು ಮಿಕಿ ಮಿಕಿ ಕೂತಿರೊಲ್ಲವೆ? ನಡೀರ್ರಿ ಈಗ ನಾನು ಕರಕೊಂಡು ಹೋದ ಕಡೇಗೆ'' ಎಂದು ಕೂಗಾಡಿದ. ಬೇಡಿಕೊಂಡು ಪ್ರಯೋಜನ ವಿಲ್ಲವೆಂದು ತಿಳಿದು ಏನು ಬಂದರೂ ಅನುಭವಿಸೋಣವೆಂದು ಮನಸ್ಸನ್ನು ಕಲ್ಲು ಮಾಡಿಕೊಂಡೆವು.


ಮಾರನೆಯ ದಿನ ನಾಲ್ಕು ಗಂಟೆಯ ಹೊತ್ತಿಗೆ ದೊಡ್ಡಪ್ಪ ನಮ್ಮೆಲ್ಲರನ್ನೂ ಮೀಟಿ ಮೀಟಿ ಎಬ್ಬಿಸುವುದಕ್ಕಾರಂಭಿಸಿದ. ಜಡೆ ಹಾಕಿಕೊಳ್ಳುತ್ತಿರುವಾಗ ಹಿಂದೆ ಬಂದು ನಿಂತು, "ಸಾಕು, ನಿನ್ನ ಶೃಂಗಾರ, ಏಳು'' ಅಂದ. ಕೋಣೆಬಾಗಿಲು ಬಡಿದು ಹೊತ್ತಾಯಿತು ಎಂದು ಕಿರಚಿ ಹೇಳಿದ. ಹತ್ತೆಂಟು ಬಾರಿ ಮನೆಯಲ್ಲೆಲ್ಲ ಅಲೆದಾಡಿದ. ಕೊನೆಗೆ ನಾಲ್ಕೂಮುಕ್ಕಾಲು ಗಂಟೆಗೆ ನಮ್ಮನ್ನೆಲ್ಲ ಕರೆದುಕೊಂಡು ಉಪನ್ಯಾಸದ ಕಡೆಗೆ ಹೊರಟ. ಆತುರಪಟ್ಟು, ದಾಪುಗಾಲು ಹಾಕಿ ಅಲ್ಲಿಗೆ ಸೇರುವ ಹೊತ್ತಿಗೆ ಇನ್ನೂ ಐದು ಗಂಟೆ. ದೊಡ್ಡಪ್ಪ ನಮ್ಮ ಕಡೆಗೆ ನೋಡಿ ನಿಟ್ಟುಸಿರು ಬಿಟ್ಟು, "ನಡೀರ್ರಿ ಈಗ, ಹಾಯಾಗಿ ಎಲ್ಲಿ ಬೇಕೋ ಅಲ್ಲಿ ಕೂತುಕೊಳ್ಳಿ, ಇನ್ನೂ ಒಬ್ಬರೂ ಬಂದಿಲ್ಲ ಸದ್ಯ" ಅಂದ. ನಮಗೆ ತಲೆ ಕುಸಿಯುವಷ್ಟು ಅವಮಾನ ವಾಯಿತು. ಆಳುಗಳೂ, ಕಾರ್ಯಕರ್ತರೂ ಇನ್ನೂ ಏರ್ಪಾಡುಗಳನ್ನು ಮಾಡುತ್ತ ಓಡಾಡುತ್ತಲೇ ಇದ್ದರು. ಆಳುಗಳು ಒಬ್ಬರ ಮುಖ ಇನ್ನೊಬ್ಬರು ನೋಡಿ ಕುಚೋದ್ಯ ಮಾಡುತ್ತಿದ್ದರು. ಒಬ್ಬ ಆಳು ವೇದಿಕೆಯ ಮೇಲೆ ಏಣಿ ಹಾಕಿ ಕೊಂಡು ಗೋಡೆಗೆ ಒಂದು ಪಠ ಬಡಿದು ಹಾರ ಹಾಕಲು ನೋಡುತ್ತಿದ್ದ. ದೊಡ್ಡಪ್ಪ ಸುಮ್ಮನಿರಲಾರದೆ, ಏಣಿಯ ಮೇಲೆ ಕಾಣುತ್ತಿದ್ದ ಬೆನ್ನನ್ನು ಹಿಂದಿನಿಂದ ಸಂಬೋಧಿಸತೊಡಗಿದ, "ಏನಪ್ಪಾ ನಿನ್ನ ಹೆಸರೇನು, ತಿಮ್ಮನೋ, ಬೋರನೋ, ಇನ್ನೂ ಎಷ್ಟು ಹೊತ್ತು ಹೀಗೆ ಹಿಂದು ಮುಂದಲಾಗಿ ಏಣಿಯ ಮೇಲೆ ನಿಂತಿರ ಬೇಕು ಅಂತ ಮಾಡಿದ್ದೀ, ಮಾನ್ಯ ಉಪನ್ಯಾಸಕರೂ, ಪೂಜ್ಯ ಅಧ್ಯಕ್ಷರೂ ಬರೋ ಹೊತ್ತು ಆಗಿಹೋಯಿತಲ್ಲ'' ಅಂದ. "ಯಾರು ಸ್ವಾಮಿ ಬರೋದು'' ಎಂದು ಏಣಿಯಿಂದ ಉತ್ತರ ಬಂತು. ದೊಡ್ಡಪ್ಪನಿಗೆ ಇನ್ನು ಮಾತು ಬೆಳಸುವುದು ಇಷ್ಟವಿರಲಿಲ್ಲ. ಅಲ್ಲಿಂದ ಎದ್ದು ಹಜಾರವನ್ನೆಲ್ಲಾ ನಾಲ್ಕು ಸುತ್ತು ಹಾಕಿದ. ಆರು ಗಂಟೆಯಾಗುವ ಹೊತ್ತಿಗೆ ಎಲ್ಲಿಂದಲೋ ಒಬ್ಬರು ಇಬ್ಬರು ಬಂದು ಮೂವತ್ತು ಜನ ಆದರು. ಉಪನ್ಯಾಸಕರೂ, ಅಧ್ಯಕ್ಷರೂ ಬಂದು ಉಪನ್ಯಾಸ ನಡೆಯಿತು. ದೊಡ್ಡಪ್ಪ ಮೊಟ್ಟಮೊದಲು ಬಂದವನೆಂದು ಬಹಳ ಮುಂದೆ ಕೂತಿದ್ದರಿಂದ, ಅವನಿಗೆ ಎಷ್ಟು ಕತ್ತೆತ್ತಿದರೂ ಮೇಜಿನ ಕಾಲಿನ ಜೊತೆಗೆ ಇನ್ನೂ ನಾಲ್ಕು ಕಾಲು ಕಾಣಿಸುತ್ತಿತ್ತೇ ಹೊರತು ಉಪನ್ಯಾಸಕರ ಮುಖ ಚೆನ್ನಾಗಿ ಕಾಣಿಸುತ್ತಿರಲಿಲ್ಲ.

ಉಪನ್ಯಾಸ ಮುಗಿಯುವ ಹೊತ್ತಿಗೆ ವೇದಿಕೆಯ ಮೇಲೆ ಒಂದು ಸ್ವಾರಸ್ಯ ವಾದ ಪ್ರಸಂಗ ನಡೆಯಿತು. ಕಾರ್ಯಕರ್ತರು ವಂದನೆ ಅರ್ಪಿಸಲು ಹೂವಿನ

ಹಾರದೊಡನೆ ಬಂದರು. ಉಪನ್ಯಾಸಕರೂ, ಅಧ್ಯಕ್ಷರೂ, ತಮ್ಮ ಅಂಕೆ ತಪ್ಪಿ ಹಾರದ ಕಡೆಗೆ ತಿರಗುತ್ತಿದ್ದ ದೃಷ್ಟಿಯನ್ನು ಬೇರೆ ಕಡೆಗೆ ಜಗ್ಗಲು ಅಸಾಧ್ಯಪ್ರಯತ್ನ ಮಾಡುತ್ತಿದ್ದರು. ಕಾರ್ಯದರ್ಶಿ ಹಲ್ಲು ಕಿರಿದು, ಬೆನ್ನು ಬಗ್ಗಿಸಿ ವಂದನೆ ತಿಳಿಸಿ, "ನಮ್ಮ ಪ್ರೀತಿ ವಿಶ್ವಾಸಗಳನ್ನು ತೋರಿಸುವುದಕ್ಕೆ ಈ ಹೂವಿನ ಹಾರದ ಕಾಣಿಕೆಯನ್ನೊಪ್ಪಿಸುತ್ತೇನೆ" ಎಂದು ಹೇಳಿ, ಕುಸ್ತಿಗೆ ಹೊರಟ ವಸ್ತಾದಿಯಂತೆ ವೇದಿಕೆಯ ಮೇಲಕ್ಕೆ ಹಾರ ಕೈಲಿ ಹಿಡಿದು ನುಗ್ಗಿದರು. ಆದರೆ ಅಷ್ಟು ರಭಸದಿಂದ ವೇದಿಕೆ ಹತ್ತಿದ್ದೂ ವ್ಯರ್ಥವಾಯಿತು. ಅಧ್ಯಕ್ಷರೂ, ಉಪನ್ಯಾಸಕರೂ ತಮಗೆ ಮೊದಲು ಬೇಡ ಅವರಿಗೆ ಹಾಕಬೇಕು ಎಂದು ಒಟ್ಟಿಗೆ ಹೇಳುತ್ತ ಹಾರವನ್ನು ತಪ್ಪಿಸಿಕೊಳ್ಳುತ್ತ ಕಾರ್ಯದರ್ಶಿಯನ್ನು ವೇದಿಕೆಯ ಮೇಲೆ ಅಲ್ಲಿಂದಿಲ್ಲಿಗೆ ಅಟ್ಟಾಡಿಸಿದರು. ಹೆಚ್ಚು ಸಂಬಳ ತಿನ್ನುವ ಗೃಹಸ್ಥ ಅಧ್ಯಕ್ಷರೆಂದು ತಿಳಿದಿದ್ದ ಕಾರ್ಯದರ್ಶಿ ಕೊನೆಗೆ ಅವರಿಗೇ ಮೊದಲು ಹಾರ ತೊಡಿಸಲು ಹೋದರು. ಕಾರ್ಯದರ್ಶಿಯ ಭಾಗಕ್ಕೆ ಅಲ್ಲೂ ಸೋಲು ಕಾದಿತ್ತು. ಒಂದು ಕ್ಷಣದಲ್ಲಿ ಅಧ್ಯಕ್ಷರಿಗೂ, ಕಾರ್ಯದರ್ಶಿಗೂ ದೊಡ್ಡ ಕುಸ್ತಿಯೇ ಪ್ರಾರಂಭವಾಯಿತು. ಹಾರ ಕೊರಳಿಗೆ ತೊಡಿಸಿಯೇ ಬಿಡುವೆನೆಂದು ಕಾರ್ಯದರ್ಶಿಯ ಧೃಡ ನಿಶ್ಚಯ. ಕೊರಳೊಡ್ಡದೆ ಕೈಯಿಂದಲೇ ಕಸಿದುಕೊಳ್ಳುವೆನೆಂದು ಅಧ್ಯಕ್ಷರ ವಿಶ್ವಪ್ರಯತ್ನ. ಯಾರಿಗೆ ಗೆಲವು ಎಂದು ಹೇಳುವುದು ಸಾಧ್ಯವಿರಲಿಲ್ಲ. ಈ ಹೊತ್ತಿಗೆ ಸರಿಯಾಗಿ ದೊಡ್ಡಪ್ಪ ಅಲ್ಲಿಂದ ಹೇಗೆ ಎದ್ದು ಬಂದನೋ, "ನಡೀರ್ರೀ, ಹೊತ್ತಾಯಿತು, ಏನು ಇಲ್ಲೇ ಮನೆ ಮಾಡಿರೋ ಹಾಗೆ ಕಾಣುತ್ತಲ್ಲ" ಎಂದು ನಮ್ಮನ್ನು ಎಬ್ಬಿಸಿ ಹೊರಗೆ ಕರೆದುಕೊಂಡೇ ಬಂದುಬಿಟ್ಟ.

ದೊಡ್ಡಪ್ಪನ ಈ ಆತುರ ಸ್ವಭಾವದಿಂದ ನಮಗೆ ಎಂಥ ಕಷ್ಟ, ಅವಮಾನ ಎಂಬುದನ್ನು ಅನುಭವಿಸಿದವರೇ ಬಲ್ಲರು. ಆ ಅವಸರ ಎಂಥದೆಂಬುದನ್ನು ನೋಡಿದಲ್ಲದೆ ಇತರರು ತಿಳಿಯಲಾರರು. ಒಬ್ಬ ಮನುಷ್ಯ ಎಲ್ಲಿ ಯಾವ ಉತ್ಸವದಲ್ಲಿ ಉಪನ್ಯಾಸದಲ್ಲಿ ಎಲ್ಲರಿಗೂ ಸ್ವಾಗತವಿದೆಯೋ ಆ ಕಡೆಗೆ, ಗಡಿಯಾರವನ್ನು ಜೇಬಿಂದ ತೆಗೆದು ನೋಡುತ್ತ ನೋಡುತ್ತ ಏದುತ್ತ ನಡೆಯುವುದನ್ನು ನೀವೆಂದಾದರೂ ನೋಡಿದ್ದೀರ? ಅವನೇ ನಮ್ಮ ದೊಡ್ಡಪ್ಪ. ಅವನ ಜೇಬಿನಲ್ಲಿ ಸುಮ್ಮನೆ ಕುಳಿತಿರಲಾರದೆ ಒದ್ದಾಡುವ ಆ ಗಡಿಯಾರ ಅವನದೇ, ಯಾವಾಗಲೂ ದಿನಕ್ಕೆ ಮೂವತ್ತು ಗಂಟೆ ಹೋಗುತ್ತಿರುವ ಬೆಳ್ಳಿಯ ಗಡಿಯಾರ.

—ಶ್ರೀಮತಿ ಕೆ. ವಿ. ರ.



ಜ ಬ್ ಕೊ

ಶಾಯಿಯನ್ನು

ಉಪಯೋಗಿಸಬಾರದೇ ?



ಕೇಸರಿ ಕುಟೀರಂ ಲಿ., ಮದರಾಸು

ಲೋಧ್ರ—ಗರ್ಭಾಶಯ ಟಾನಿಕ್

ಅಕ್ರಮ ಮುಟ್ಟು, ಬಂಜೆತನ, ಗರ್ಭಜವಾಯು, ನಿದ್ರಾಭಂಗ, ಅಜೀರ್ಣ, ಮಲಬದ್ಧತೆ, ಕೆಮ್ಮು, ತಲೆನೋವು, ಬೆನ್ನುನೋವು ಮುಂತಾದುವನ್ನು ವಾಸಿಮಾಡುವುದು.

ಅರ್ಕ—ಶ್ರೇಷ್ಠ ಜ್ವರ ನಿವಾರಿಣಿ

ಇನ್‌ಫ್ಲೂಯಂಜಾ, ಟೈಫಾಯಿಡ್, ಮಲೇರಿಯ ಮುಂತಾದ ಎಲ್ಲಾ ವಿಧವಾದ ಜ್ವರಗಳನ್ನೂ ಪ್ಲೀಹ ಮತ್ತು ಪಿತ್ತಕೋಶ ರೋಗಗಳನ್ನೂ ಗುಣಪಡಿಸುವುದು.

ಅಮೃತ—ರಕ್ತಶುದ್ಧಿ ಟಾನಿಕ್

ಎನೀಮಿಯ, ಮಲಬದ್ಧತೆ, ಅಜೀರ್ಣ, ನಿಶ್ಶಕ್ತಿ, ಬುದ್ಧಿಮಾಂದ್ಯ, ಎದೆಯ ನಿಶ್ಶಕ್ತಿ, ಜ್ಞಾಪಕಶಕ್ತಿ ಇಲ್ಲದಿರುವದು, ದೃಷ್ಟಿಮಾಂದ್ಯ, ತಲೆ ತಿರುಗುವುದು, ಚರ್ಮ ರೋಗಗಳು ಮುಂತಾದುವನ್ನು ವಾಸಿಮಾಡುವುದು.


ಏಜಂಟರು :

ಸಿಟಿ ಮೆಡಿಕಲ್ ಅಂಡ್ ಜನರಲ್ ಏಜನ್ಸಿ,

ಚಿಕ್ಕಪೇಟೆ, : : : ಬೆಂಗಳೂರು ಸಿಟಿ.

ಮೆಜೆಸ್ಟಿಕ್ ಟಾಕೀಸಿನಲ್ಲಿ

ಬರುವ
ತಾರೀಖನ್ನು
ಗಮನಿಸಿ



ಬರುವ
ತಾರೀಖನ್ನು
ಗಮನಿಸಿ

ಸೌಭಾಗ್ಯ ಫಿಕ್ಚರ್ಸ್‌ರವರ

ಹಾಸೊ - ಹಾಸೊ

- ಓ -

ದುನಿಯಾವಾಲೊ

ತಾರಾಗಣ:

ರತನ್‌ಬಾಯ್ - ಷಾಜಾದಿ - ಗೋಪೇ

ವಿವರಗಳಿಗೆ —

ಚಂದ್ರ ಫಿಲ್ಮ್ಸ್ ಲಿಮಿಟೆಡ್

ಗಾಂಧಿನಗರ, ಬೆಂಗಳೂರು

— ಇವರಿಗೆ ಬರೆಯಿರಿ

Pridted by B. S. Iyengar, Bangalore City.—Publisher—B. N. Gupta
Editor, M. SHIVARAM.